ಅಪರಂಜಿ

ಸಂಪುಟ-೪
ಸಂಚಿಕೆ-೭
ಏಪ್ರಿಲ್-1987

ತಿಳಿನಗೆಯ ಕಾರಂಜಿ



ಯುಗಾದಿ ವಿಶೇಷಾಂಕ

- ಆನಂದ್
- ನಳಿನೀಪ್ರಿಯ
- ಶೀನೂ
- ಬಿ. ನಾಗೇಂದ್ರ
- ಭುವನೇಶ್ವರಿ ಹೆಗಡೆ
- ವಿ. ಜಿ. ಭಟ್ಟ
- ಬಿ. ಎಸ್. ಚಂದ್ರಶೇಖರ್
- ಶಿವು
- ಸೂರಿ
- ದಾಶರಥಿ ದೀಕ್ಷಿತ್
- ಕೇಫ
- ಕಮಲಾ ರಾಮಸ್ವಾಮಿ
- ಬಿ. ಎಂ. ಎನ್. ಮೂರ್ತಿ

ಬಿಡಿಪ್ರತಿ :ಕೇವಲ ಒಂದೂವರೆ ರೂಪಾಯಿ



(ತಿಳಿನಗೆಯ ಕಾರಂಜಿ)

ಸಂಪುಟ ೪ ಏಪ್ರಿಲ್ 1987 ಸಂಚಿಕೆ ೭

ಬಿಡಿ ಪ್ರತಿ :—ಕೇವಲ ಒಂದೂವರೆ ರೂಪಾಯಿ

ವಾರ್ಷಿಕ ಚಂದಾ ರೂ. 15/-

ಆಜೀವ ಚಂದಾ : ರೂ. 150/-

ಪೋಷಕರು : ರೂ. 500/-

ಎರಡು ಮಾತು

ಇಂದು ಪ್ರಭವ ಯುಗಾದಿ. ಹೊಸ ವರುಷ ಅಪರಂಜಿಯ ಓದುಗರು, ಬರಹಗಾರರು, ಜಾಹೀರಾತುದಾರರು ಹಾಗೂ ಇನ್ನೆಲ್ಲ ಹಿತೈಷಿಗಳಿಗೂ ಸಕಲ ಸನ್ಮಂಗಳ ವನ್ನುಂಟು ಮಾಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ. ಅಪರಂಜಿ ಹಬ್ಬದ ವರ್ಣರಂಜಿತ ಉಡುಪನ್ನು ತೊಟ್ಟು ಎಂದಿಗಿಂತ ಹೆಚ್ಚು ಮೈ ತುಂಬಿ ಕೊಂಡು ನಿಮ್ಮೆಲ್ಲರ ಮನೆಗಳಿಗೆ ಬಂದಿದ್ದಾಳೆ. ಆದರಿಂದ ಬರ ಮಾಡಿಕೊಳ್ಳಿ.

ಶಿವಕುಮಾರ್

ಸಂಪಾದಕರು ಮತ್ತು ಪ್ರಕಾಶಕರು

ಗೌರವ ಸಲಹೆಗಾರರು

ಶ್ರೀ ಅ.ರಾ.ಸೇ.

ಶ್ರೀ ಶೇಷಗಿರಿ

ಅಪರಂಜಿ ಕಾರ್ಯಾಲಯ

36, 6ನೇ ಮುಖ್ಯ ರಸ್ತೆ

ಮಲ್ಲೇಶ್ವರಂ

ಬೆಂಗಳೂರು–560 003

ಈ ಸಂಚಿಕೆಯಲ್ಲಿ……

ವ್ಯಂಗ್ಯ ಚಿತ್ರಗಳು · ಆರ್. ಕೆ. ಲಕ್ಷ್ಮಣ್, ಸೂರಿ, ಚಂದ್ರು.

ಮುದ್ರಣ · ಇಂಪ್ರೆಷನ್ಸ್, ಬೆಂಗಳೂರು-3 ದೂರವಾಣಿ : 362989, 363444

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ–೪ ಏಪ್ರಿಲ್–೧೯೮೭ ಸಂಚಿಕೆ–೭

ಅವೆರಡರಲ್ಲಿ ಒಂದು ಪಿಪ್ಪಲವನ್ನು ಸವಿದು ತಿನ್ನುತ್ತದೆ.

—ಪೈಂಗಿ (?)

ಶರೀರವೆಂಬ ಮರದ ಒಂದೇ ಕೊಂಬೆಯಲ್ಲಿ ಎರಡು ಹಕ್ಕಿಗಳಿವೆ. ಅವುಗಳೊಳಗೊಂದು ಹಣ್ಣನ್ನು ಸವಿಯುತ್ತದೆ; ಇನ್ನೊಂದು ತಿನ್ನದೆ ನೋಡುತ್ತಿರುತ್ತದೆ.

ರಾಷ್ಟ್ರವೆಂಬ ಮರದ ಕೊಂಬೆಯಲ್ಲಿ ಪ್ರತಿನಿಧಿ ಎಂಬ ಹಕ್ಕಿ ಅಧಿಕಾರ ಸಂಪತ್ತುಗಳನ್ನು ಸವಿದು ತಿನ್ನುತ್ತಿರುತ್ತಾನೆ. ಶ್ರೀಸಾಮಾನ್ಯನೆಂಬ ಪ್ರಜೆ ಬಾಯಿ ಬಿಟ್ಟುಕೊಂಡು (ಬರಿಹೊಟ್ಟೆ), ಗುಳಿಬಿದ್ದ ಕಣ್ಣುಗಳಿಂದ ನೋಡುತ್ತಾ ಇರುತ್ತಾನೆ.

ತಿನ್ನುವ ಹಕ್ಕಿ ಜೀವ; ಸಾಕ್ಷಿಯಾಗಿ ನೋಡುವವನು ಪರಮೇಶ್ವರ. ಇವರಿಬ್ಬರೂ ಬೇರೆ ಬೇರೆ ಎಂಬುದೇ ಭೇದ-ವಾದ. ಇದು ಲೋಕದ ವ್ಯವಹಾರ, ಆದರಿದು ಪರಮಾರ್ಥ ಸತ್ಯವಲ್ಲ.

ಪರಮೇಶ್ವರನಿಗೆ ಕಾಮಗಳಿಲ್ಲ, ಪ್ರಜೆಯೂ ತನ್ನ ಕಾಮಗಳನ್ನು ಪೂರೈಸಿಕೊಳ್ಳಲಾಗದೆ, ಅಭಾವ ವೈರಾಗ್ಯದಿಂದ ಕಾಮರಹಿತನಾಗಿರಬೇಕಾಗುತ್ತದೆ. ಜೀವನಾದ ಪ್ರತಿನಿಧಿ ತಾನು ಕರ್ತೃ ಮತ್ತು ಭೋಕ್ತೃ ಎಂದು ತಿಳಿಯುತ್ತಾನೆ. ತಾನು ರಾಷ್ಟ್ರಜೀವನದ ನೇತಾರನೆಂದೇ ಪ್ರತಿನಿಧಿ ಭ್ರಮಿಸುತ್ತಾನೆ. ಆಪಾತ ರಮಣೀಯ ಭೋಗಗಳನ್ನನುಭವಿಸುತ್ತಾನೆ. ಆದರೆ ನಶ್ವರವಾದ ಪ್ರತಿನಿಧಿಗಿರಿ ಉರುಳಿದೊಡನೆ ತಾನು ಒಬ್ಬ ಪ್ರಜೆ; ಅಧಿಕಾರವೆಂಬ ಭ್ರಮೆ ತನಗೆ ಹಿಡಿದಿತ್ತು ಎಂದು ಭಾವಿಸುತ್ತಾನೆ. ಇದು ಅಭೇದವಾದ, ಪಾರಮಾರ್ಥಿಕ ಸತ್ಯ.

ಅಪರಂಜಿ ಕಿಡಿ

—ಆನಂದ್

ಶ್ರೀ ವೆಂಕಟೇಶ್ವರನ್ ಅವರು ನೀಡಿದ್ದು ರಾಜೀನಾಮೆಯೋ, ರಾಜೀವ ನಾಮೆಯೋ, ಇನ್ನೂ ಖಚಿತವಾಗಿ ತಿಳಿದುಬಂದಿಲ್ಲವಂತೆ!

* * *

ಕೆಲವು ಪತ್ರಿಕೆಗಳಲ್ಲಿ ಹಾಸ್ಯ ಲೇಖನಗಳ ಮೇಲೆ 'ಹಾಸ್ಯ' ಅಂತ ಬರೆದಿರು ತ್ತಾರಲ್ಲ, ಏಕೆ ? ಅಂತ ನಮ್ಮ ಓದುಗರೊಬ್ಬರು ಕೇಳಿದ್ದಾರೆ.

ಹಾಸ್ಯ ಪ್ರಜ್ಞೆ ಇಲ್ಲದಿರುವವರು ಆ ಲೇಖನಗಳನ್ನು ಬಿಟ್ಟು, ಬೇರೆ ಓದಲು ಅನುಕೂಲ ಆಗಲಿ ಅಂತಿರಬಹುದು !

* * *

ಎಲ್.ಐ.ಸಿ. ಯವರು ಮಕ್ಕಳ ಮೆಡಿಕಲ್ ಕಾಲೇಜ್ ಕ್ಯಾಪಿಟೇಷನ್ ಹಣಕ್ಕೆ ಅನುಕೂಲ ಆಗುವಂತೆ ಜೀವ ವಿಮೆ ಪಾಲಿಸಿ ಶುರು ಮಾಡಬಾರದೇಕೆ ?

* * *

ಸೀಟು ಶುಲ್ಕ ತಡೆಗೆ ಶೀಘ್ರವೇ ಶಾಸನ.

—ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರು.

ಕ್ಯಾಪಿಟೇಷನ್ ಫೀ ಸಹ ಒಂದು ವಿಧದಲ್ಲಿ ಮಾನವ ಸಂಪನ್ಮೂಲವೇ ಅಲ್ಲವೆ?

* * *

ನಾಡಿಗೆಲ್ಲ ಗ್ರಾಹ್ಯವಾಗುವ ಕನ್ನಡ ಭಾಷೆ.

—ಶ್ರೀ ಶಿವರಾಮ ಕಾರಂತ

ಖರೇ ರೀ ಲಗೂನ ಜಾರೀಗೆ ಬರ್ಬೇಕ್ರಿ !

* * *

ಬೆಳಗಿನ ಟಿ.ವಿ.ನಲ್ಲಿ ಕಸರತ್ತುಗಳನ್ನ ತೋರಿಸಿದ ಮೇಲೆ ನಮ್ಮ ಕೆಲಸ ಇನ್ನೂ ಜಾಸ್ತಿ ಆಗಿದೆ ಅಂತ ಮೂಳೆ ತಜ್ಞ ಡಾಕ್ಟರುಗಳೆಲ್ಲ ನಸು ನಕ್ಕರಂತೆ.

* * *

186000 ವರ್ಷಗಳ ಹಿಂದೆ ನಾಶವಾದ ತಾರೆಯ ಬೆಳಕು ಈಗ ನಮಗೆ ತಲುಪಿದೆ.

—ಸುದ್ದಿ

ಗಟ್ಟಿಯಾಗಿ ಹೇಳಬೇಡಿ, ಸರ್ಕಾರ ವಿಚಾರಣಾ ಆಯೋಗ ನೇಮಿಸಿ ಬಿಟ್ಟೀತು !

* * *

ಬಾಹ್ಯಾಕಾಶದ ತಾರೆಗಳು 'ಮಧ್ಯ ವಯಸ್ಕ' ತಾರೆಗಳಾದ್ದರಿಂದ. ಅವು ಅಪಾಯಕಾರಿಗಳಲ್ಲಿ ಎಂದು ಹೇಳಿಕೆ ನೀಡಲಾಗಿದೆ,

—ಪತ್ರಿಕೆ

ಮುಂಬಯಿ ತಾರೆಗಳಂತೆಯೇ !

* * *

ಭವಿಷ್ಯದಲ್ಲಿ ನಾನು ಒಳ್ಳೆಯ ಸಿನಿಮಾಕ್ಕೆ ಬೆಂಬಲ ಕೊಡುತ್ತೇನೆ.

—ಅಮಿತಾಭ್ ಬಚ್ಚನ್


ಅಂದರೆ......ಇದುವರೆಗೂ......?

* * *

ಬುದ್ಧಿಯಿರುವವರಲ್ಲಿ ಬಹಳ ಕಮ್ಮಿ ಜನ ರಾಜಕೀಯ ಸೇರುತ್ತಾರೆ.

—ಶ್ರೀ ಜೇಲ್ ಸಿಂಗ್

ಅವರಿಗೆ ಈ ಕಠೋರ ಸತ್ಯ ಯಾವಾಗ ಹೊಳೆಯಿತೋ ?



ಬೆಂಗಳೂರು ಇಂದು ೧೩

—ನಳಿನೀಪ್ರಿಯಃ

ಅತ್ಯುತ್ತಮ ಮನರಂಜನೆ

ವಸಂತನಗರದ ವೆಂಕೋಬರಾಯ ಕಿಡಿಕಿಡಿಯಾಗಿದ್ದ. "ಥೂ, ಜುಗ್ಗ ನನ್ಮಕ್ಳು. ಪ್ರತಿ ಶನಿವಾರ ಟಿ.ವಿ.ನಲ್ಲಿ ಯಾವುದೋ ಓಬೀರಾಯನ ಕಾಲದ ಕಪ್ಪು ಬಿಳುಪು ಕನ್ನಡ ಚಿತ್ರ ಹಾಕ್ತಾರೆ. ಯಾವ್ದಾದರೂ ಹೊಸಾ ಹೊಸ ವರ್ಣಚಿತ್ರ ಪ್ರಸಾರ ಮಾಡೋಕ್ಕೆ ಏನ್ಬಂದಿದೆಯೋ ಕೇಡು" ಅಂತ ಕೂಗಾಡ್ತಿರೋವಾಗ್ಲೆ ನಮ್ಮ ಸೋಮು ಒಳಕ್ಕೆ ಬಂದ. ಕಸದಿಂದ ರಸ ತೆಗೆಯೋದರಲ್ಲಿ ಮಹಾ ನಿಪುಣ ಸೋಮು. ನೇರವಾಗಿ ಮುಖ್ಯ ವಿಷಯಕ್ಕೆ ಬಂದ.

"ಯಾಕೆ ಹಾಗಂತೀ ವೆಂಕೋಬ ! ನಾನಂತೂ ಶನಿವಾರ ಯಾವಾಗ ಬರುತ್ತೋ ಅಂತ ಕಾಯ್ತಾ ಇರ್ತೀನಿ. ಚಿತ್ರ ಹಳೇದಾದಷ್ಟು ಮಜಾ ಜಾಸ್ತಿ. ನೋಡೊ ಕಣ್ಣು ಸ್ವಲ್ಪ ಬೇರೆಯಾಗಿರಬೇಕು, ಅಷ್ಟೆ. ಹಳೇ ಚಿತ್ರಗಳೆಲ್ಲಾ ಒಂದೇ ಜಾಯಮಾನ, ಒಂದೇ ಜಾಡಿನ ಕಥೆಗಳು, ಸಂಭಾಷಣೇನೂ ಒಂದೇ ತರಹ. ಉದಾಹರಣೆಗೆ, ಖಳನಾಯಕ, ಯಾವ ಚಿತ್ರದಲ್ಲೇ ಆಗಿರಲಿ, ಒಂದಲ್ಲ ಒಂದು ಬಾರಿ "ನನ್ನ ಕೈಗೆ ಸಿಕ್ಕಿದ ಮೇಲೆ ನಿನ್ನ ಗತಿ...... ಹ್ಹ ಹ್ಹ ಹ್ಹ ಹ್ಹ ಹ್ಹಾ !" ಅಂತ ಗಹಗಹಿಸಿ ನಗಲೇಬೇಕು. ಹಾಗೆ ನಕ್ಕಾಗಲೆಲ್ಲಾ ನಾನು ಹತ್ತು ಅಂಕಗಳನ್ನ ಕೊಡ್ತೀನಿ. ನಾಯಕಿ "ಥೂ ಹೋಗಿ ನೀವು ಯಾವಾಗಲೂ ಹೀಗೆ !" ಅಂತ ನಾಚಿದರೆ ಹದಿನೈದು ಅಂಕಗಳು. "ನಾವು ಬಡವರಿರಬಹುದು. ಆದರೆ ಗೌರವಕ್ಕೆ ಬಡತನ ಇಲ್ಲ" ಅಂತ ನಾಯಕ ಹೇಳಿದ್ರೆ ಇಪ್ಪತ್ತು ಅಂಕಗಳು. ನಾಯಕ ನಾಯಕಿ ಉದ್ಯಾನವನವೊಂದರಲ್ಲಿ ಅದೃಶ್ಯ ಆರ್ಕೆಸ್ಟ್ರಾ ಹಿಮ್ಮೇಳಕ್ಕೆ ಸರಿಯಾಗಿ ಮರ ಸುತ್ತುತ್ತಾ ಇರುವಾಗ, ನಾಯಕನ ಮುದಿ ತಾಯಿ ಮುರುಕು ಹೆಂಚಿನ ಮನೆಯಲ್ಲಿ ಮಿಣುಕು ದೀಪದ ಅಡಿಯಲ್ಲಿ ಏಳು

ಸಲ ಕಟ್ಟಿದಾಗಿ ಕೆಮ್ಮಿ ಧೊಪ್ಪನೆ ಹಾಸಿಗೆಯ ಮೇಲೆ ಉರುಳಿದರೆ ಇಪ್ಪತ್ತೈದು ಅಂಕಗಳು ! ಹೀಗೇ ಸ್ಕೋರ್ ಮಾಡ್ತಾ ಕೂತಿರ್‍ತೇನೆ. ಕ್ವಿಜ್ ಟೈಮ್‌ಗಿಂತ ಹತ್ತುಪಟ್ಟು ಇಂಟರೆಸ್ಟಿಂಗಾಗಿರುತ್ತೆ. ವೆಂಕೋಬ, ರೇಗೋದು ಯಾಕೆ ?"

ಮಹೇಶನ ಸಮ್ಮರ್ ಕ್ಯಾಂಪ್

ಮಲ್ಲೇಶ್ವರದ ಮಂಜುನಾಥ್ ದಂಪತಿಗಳ ಎಂಟು ವರ್ಷದ ಮುದ್ದಿನ ಕುವರ ಮಹೇಶ. ಕಾನ್ವೆಂಟಿನಲ್ಲಿ, ಓದು. ಅಂದ ಮೇಲೆ ಆಟಕ್ಕೆ ತಕ್ಕ ವೇಷ ಅನ್ನೋಹಾಗೆ ಯೂನಿಫಾರಂ, ಷೂ, ಇವುಗಳೆಲ್ಲದರ ಜೊತೆಗೆ ರಜಾ ಬಂತೂ ಅಂದ್ರೆ ಸಮ್ಮರ್ ಕ್ಯಾಂಪ್ ಬೇರೆ. ಮಹೇಶನ ಅಮ್ಮನಿಗೊ ಮುದ್ದು ಮಗೂನ ಒಂದು ವಾರದ ಕಾಲ ಹೇಗೆ ಬಿಟ್ಟಿರೋದು ಅನ್ನೋದೇ ಒಂದು ದೊಡ್ಡ ಚಿಂತೆಯಾಗಿ ಬಿಟ್ಟಿತ್ತು. ಆದರೆ ಹಾಗಂತ ಕ್ಯಾಂಪಿಗೆ ಕಳಿಸ್ದೇ ಇರುಕ್ಕಾಗುತ್ಯೆ ? ಕಳಿಸೇ ಕಳಿಸಿದರು. ಕುಂಬಳಗೋಡಿನಲ್ಲಿದ್ದ ಕ್ಯಾಂಪ್‌ನಿಂದ ಎರಡನೇ ದಿನಾನೇ ಮಹೇಶನಿಂದ ತನ್ನ ತಂದೆ ತಾಯಿಗೆ ತುರ್ತು ಸಂದೇಶ. ಅಂತಹ ತುರ್ತಿನ ಸುದ್ದಿ ಏನು ಅಂತೀರಾ ?

"ಇಲ್ಲಿ ಬೆಳಗಿನ ತಿಂಡಿ, ಮಧ್ಯಾಹ್ನದ ಊಟ, ಸಂಜೆಯ ಉಪಾಹಾರ, ರಾತ್ರಿಯ ಡಿನ್ನರ್ ಬಿಟ್ಟರೆ ತಿನ್ನುಕ್ಕೆ ಏನೂ ಸಿಗುತ್ತಿಲ್ಲ. ಹಸಿವಿನಿಂದ ಸಾಯುಕ್ಕೆ ಮುಂಚೆ ಬೇಗ ತಿಂಡಿ ಪೊಟ್ಟಣ ಕಳಿಸಿ—ಮಹೇಶ."

ಎಂಟು ವರ್ಷಕ್ಕೆ ದಂಟು

ಶೇಷಾದ್ರಿಪುರದ ರಾಜಣ್ಣ, ಅವನಿಗಿಂತ ಹೆಚ್ಚಾಗಿ ರಾಜಣ್ಣನ ಪತ್ನಿ ಸುಜಾತ ಹಿರಿಹಿರಿ ಹಿಗ್ಗುತ್ತಿದ್ದಾರೆ. ಕಾರಣ—ಅವರ ಮಗ ಅರುಣ ಹುಟ್ಟಿದಂದಿನಿಂದಲೇ ಮಹಾ ಮೇಧಾವಿ ಎಂಬ ದೃಢ ನಂಬಿಕೆ. ಎರಡು ವರ್ಷಕ್ಕೆ ಅರುಣ ಓದೋದನ್ನ ಕಲಿತು, ನಾಲ್ಕು ವರ್ಷಕ್ಕೇ ಸಸ್ಯ ಶಾಸ್ತ್ರದ ಪಾಠಗಳನ್ನೆಲ್ಲಾ ಚಾಚೂ ತಪ್ಪದೆ ಒಪ್ಪಿಸುತ್ತಿದ್ದನಂತೆ. ಪೂರ್ವ ಜನ್ಮದ ಸಂಸ್ಕಾರ ಅಂತ ನೆರೆಹೊರೆಯವರ ನಂಬಿಕೆ. ಅರುಣ ಚೈಲ್ಡ್ ಪ್ರಾಡಿಜಿ ಅಂತ ಶಾಲೆಯವರೂ ಒಪ್ಪಿಕೊಂಡು, ನೇರವಾಗಿ ಕಾಲೇಜ್‌ಮಟ್ಟದ ಸಸ್ಯ ಶಾಸ್ತ್ರ ಪಾಠಗಳನ್ನೇ ಹೇಳಲು ಶುರುಮಾಡಿದರಂತೆ. ಅರುಣ ಎಂಟು ವರ್ಷದವನಿದ್ದಾಗ ಸಸ್ಯ ಶಾಸ್ತ್ರದ ಒಂದು ಪ್ರೌಢ ಪರೀಕ್ಷೆಯನ್ನೇ ತೆಗೆದುಕೊಳ್ಳಬೇಕಾಯಿತು.

ಇತ್ತೀಚಿನ ಸಂಶೋಧನೆಯನ್ನು ಕುರಿತ ಒಂದು ಪ್ರಶ್ನೆ. ಸೊಪ್ಪುಗಳಲ್ಲಿರುವ ವಿವಿಧ ಪೌಷ್ಟಿಕಾಂಶಗಳ ಬಗ್ಗೆ. ಈ ಎಲ್ಲ ಪೌಷ್ಟಿಕಾಂಶಗಳೂ ಯಾವ ಸೊಪ್ಪಿನಲ್ಲಿವೆ

ಎಂಬ ಪ್ರಶ್ನೆಗೆ ಅರುಣ ಥಟ್ಟನೆ "ದಂಟು" ಅಂತ ಸರಿಯಾಗಿ ಉತ್ತರಿಸಿ ಪರೀಕ್ಷಕರನ್ನು ಬೆರಗುಗೊಳಿಸಿದನಂತೆ. ರಾಜಣ್ಣ ಇದನ್ನೆಲ್ಲಾ ನಮಗೆ ಜಂಭದಿಂದ ಹೇಳುತ್ತ "ಅಷ್ಟಲ್ಲದೇ ನಮ್ಮ ಪೂರ್ವಿಕರು ಇದರ ಬಗ್ಗೆ ಗಾದೆ ಮಾಡುತ್ತಿದ್ದರೇನೋ" ಅಂತ ಸೇರಿಸಿದ.

ಇದ್ದದ್ದು ಇದ್ದ ಹಾಗೆ ಹೇಳಿದರೆ...... ... .

ಮೊನ್ನೆ ಬ್ಯಾಟರಾಯನಪುರದಲ್ಲಾದ ಘಟನೆ ಇದು. ಯಾಕೋ ಈ ಬಾರಿಯು ವರದಿಯಲ್ಲಿ ಎಂಟು ವರ್ಷದ ಹುಡುಗರೇ ತುಂಬಿದ್ದಾರೆ. ಮಹೇಶ, ಅರುಣರ ನಂತರ ಈಗ ವಲೀಶನ ಸರದಿ ಅಂದು ಸಂಜೆ ವಲೀಶನನ್ನ ಅವನ ತಾಯಿ ಚೆನ್ನಾಗಿ ತದುಕಿದರಂತೆ. ತನ್ನ ಪಾಡಿಗೆ ಪಾಠ ಓದುತ್ತಾ ಕುಳಿತಿರುವ ಹುಡುಗನ್ನ ಥಳಿಸೋದೇ. ಎಂತಹ ತಾಟಕಿಯಪ್ಪ ಅಂತ ಬೆರಗಾಗಬೇಡಿ. ಬನ್ನಿ ನೇರವಾಗಿ ವೀಣಮ್ಮನವರಿಂದಲೇ ಸಮಜಾಯಿಸಿ ಕೇಳೋಣ.

"ಅಯ್ಯೋ ಅದನ್ನೇನ್ರಿ ತಿರುಗಾ ಕೇಳ್ತೀರಾ ? ಆವಾಗ್ನಿಂದ ಮರ್‍ಯೋದಕ್ಕೆ ಪ್ರಯತ್ನಿಸ್ತಿದಿನಿ. ಅಪರಂಜಿ ವರದಿಗೋಸ್ಕರ ಅಂದ್ರ. ಹೋಗ್ಲಿ ಹೇಳ್ತೀನಿ ಕೇಳಿ. ಒಂದು ವಾರದಿಂದ ಒಂದು ಸರಕ್ಕಾಗೋ ಅಷ್ಟು ಚಿನ್ನ ಖರೀದಿಸ್ಬೇಕು ಅಂತ ಯೋಜನೆ ಹಾಕಿದ್ವಿ. ನಿನ್ನೆ ನಮ್ಮೆಜಮಾನ್ರು ಬ್ಯಾಂಕಿಂದ ಎರಡು ಸಾವಿರ ನಗದನ್ನು ಅದಕ್ಕಾಗಿ ಮನೇಲಿ ತಂದಿಟ್ಟಿದ್ರು. ಇವತ್ತು ಮಧ್ಯಾಹ್ನ ಒಬ್ಬಾಕೆ ಬಂದು ಬಾಗಿಲು ತಟ್ಟಿದ್ಲು. ಜೊತೇಲಿ ಒಂದು ಹೆಣ್ಣು ಮಗು ಬೇರೆ. ಆಂಧ್ರದ ಕಡೆಯವರಂತೆ. ನೋಡೋಕ್ಕೆ ತುಂಬಾ ಮರ್ಯಾದಸ್ಥರ ತರ ಕಾಣಿಸ್ತಿದ್ಲು. ಏನೋ ಕಷ್ಟದಲ್ಲಿದ್ದಳಂತೆ. ಹಿಂದಿನಿಂದ ಬಂದ ಆಸ್ತಿ ಚಿನ್ನ ಸ್ವಲ್ಪ ಇದೆ. ಅಂಗಡೀಲಿ ಒಳ್ಳೇ ಬೆಲೆ ಬರಲ್ಲ, ನೀವು ಕೊಂಡು ನನ್ನ ಕಷ್ಟಕ್ಕೆ ಸಹಾಯ ಮಾಡ್ತೀರಾ ಅಂತ ಕೇಳಿ, ತನ್ನ ಹತ್ರ ಇದ್ದ ಚಿನ್ನದ ಗಟ್ಟಿ ತೋರಿಸಿದ್ಲು. ಹ್ಯಾಗೆ ಥಳಾಥಳಾ ಅಂತ ಹೊಳೀತಿತ್ತು ಅಂತೀರಾ. ಏನು ಬೆಲೆ ಕೊಡಬೇಕಮ್ಮ ಅಂತ ಕೇಳಿದೆ. ಮಾರುಕಟ್ಟೇಲಿ ಇದಕ್ಕೆ ನಾಲ್ಕು ಸಾವಿರ ಆಗತ್ತೆ. ನೀವು ಎಷ್ಟು ಕೊಡ್ತೀರೊ, ಕೊಡಿ ಅಂತ ದೈನ್ಯದಿಂದ ನುಡಿದಳು. ಎರಡು ಸಾವಿರಕ್ಕೇ ವ್ಯಾಪಾರ ಕುದುರಿಸ್ದೆ. ಯಜಮಾನ್ರು ಸಂಜೆ ಬಂದ ಮೇಲೆ ಅಕ್ಕಸಾಲಿಗನ ಹತ್ರ ತೋರಿಸ್ದಾಗ ಗೊತ್ತಾಯ್ತು ನಾವು ಮೋಸ ಹೋದದ್ದು. ಅದೇ ಸಮಯಕ್ಕೆ ನಮ್ಮ ವಲೀಶ ಜೋರಾಗಿ "ಥಳಥಳನೆ ಹೊಳೆಯುವುದೆಲ್ಲ ಚಿನ್ನವಲ್ಲ" ಅಂತ ಪಾಠ ಓದ್ತಿರಬೇಕೆ. ನನಗಂತೂ ಕೋಪ ತಡೆಯೋಕ್ಕೇ ಆಗಲಿಲ್ಲ. ನೀವಾದ್ರು ಏನು ಮಾಡ್ತಿದ್ರಿ ಹೇಳಿ !"

ಕ್ಲಾಸೋ ಹಾಸಃ

—ಭುವನೇಶ್ವರಿ ಹೆಗಡೆ

ಒಂದು ಶಾಲೆ. ಲೆಕ್ಕದ ಕ್ಲಾಸು ನಡೆದಿತ್ತು. ಮೇಷ್ಟ್ರು ಕೇಳಿದರು "ನೋಡಪ್ಪ ಅಶೋಕ್, ನಾನು ನಿನ್ನ ಅಪ್ಪನಿಗೆ ಐದು ನೂರು ರೂಪಾಯಿ ಕೊಟ್ಟೆ ಅಂತಿಟ್ಕೋ. ತಿಂಗಳಿಗೆ ಒಂದು ನೂರು ರೂಪಾಯಂತೆ ಆತ ನನಗೆ ವಾಪಸ್ಸು ಕೊಡುತ್ತಾ ಬರಬೇಕು. ನಾಲ್ಕು ತಿಂಗಳು ಕಳೆದ ಬಳಿಕ ಅವರ ಬಳಿ ನನ್ನ ಹಣ ಎಷ್ಟು ಬಾಕಿ ಉಳಿಯಿತು ?"

ಅಶೋಕ್ ತಣ್ಣಗೆ ಎದ್ದು ನಿಂತು ಹೇಳಿದ "ಐದ್ನೂರು ಸಾರ್" ಮೇಷ್ಟ್ರಿಗೆ ಸಿಟ್ಟು ಬಂತು. ಇಷ್ಟು ಸರಳವಾದ ಲೆಕ್ಕ ಎಷ್ಟು ತಪ್ಪು ಉತ್ತರ ಕೊಡ್ತಿದಾನೆ ಅನ್ನಿಸಿ ಗುಡುಗಿದರು

"ಮೂರ್ಖ, ಕೂತ್ಕೋ. ನಿನಗೆ ಲೆಕ್ಕದ ಬಗ್ಗೆ ಏನೂ ಗೊತ್ತಿಲ್ಲ" ಅಶೋಕ್ ಕುಳಿತುಕೊಳ್ಳುವಾಗ ಮೆಲ್ಲಗೆ ಹೇಳಿದ:

"ಇರಬಹುದು ಸಾರ್. ಆದರೆ ನಿಮಗೆ ನನ್ನ ಅಪ್ಪನ ಬಗ್ಗೆ ಏನೂ ಗೊತ್ತಿಲ್ಲ" ಅವನ ಅಪ್ಪನಿಗೆ ತೆಗೆದುಕೊಂಡ ಹಣ ವಾಪಸ್ಸು ಕೊಡುವ ರೂಢಿ ಇಲ್ಲ ಅಂತ ತಿಳಿಯುತ್ತಲೇ ಮೇಷ್ಟ್ರ ಕೋಪ ಇಳಿಯಿತು.

ನನಗೆ ಚಿಕ್ಕಂದಿನಲ್ಲಿ ಪಾಠ ಮಾಡಿದ ತಿಪ್ಪೇಶಿ ಮೇಷ್ಟ್ರು ಹೇಳಿದ ಜೋಕು ಇದು. ನನ್ನ ಪ್ರಾಥಮಿಕ ಶಾಲೆ ಇದ್ದುದು ಒಂದು ಗುಡ್ಡದ ಮೇಲೆ. ಸುತ್ತಲೂ ತಂಪು ಗಾಳಿ ಸೂಸುವ ಮರಗಳು. ಮಧ್ಯಾಹ್ನ ಊಟ ಮಾಡಿ ಬಂದ ನಾವುಗಳೆಲ್ಲ ಆ ತಂಗಾಳಿಯ ಅಮಲಿನಲ್ಲಿ ಸುಮಾರು ಅರೆ ನಿದ್ರಿತ ಸ್ಥಿತಿಯಲ್ಲಿ ಇರುತ್ತಿದ್ದವು (ಜೋಲಿ ಹೊಡೆಯುತ್ತಿದ್ದೆವು). ಒಂದೊಂದು ಸಲವಂತೂ ತಿಪ್ಪೇಶಿ ಮೇಷ್ಟ್ರು,

"ಅಶೋಕನು ಬಿಂದುಸಾರನ ಮಗನು. ಅವನು ಸಾಲು ಮರಗಳನ್ನು ನೆಟ್ಟನು. ಕೆರೆಗಳನ್ನು ತೋಡಿಸಿದನು"......... ಎಂದೆಲ್ಲ ಒಂದೇ ಸಮನೆ ಹೇಳು ತ್ತಿದ್ದಾಗ ಅದೊಂದು ಬಗೆಯ ಜೋಗುಳದಂತೆ ಭಾಸವಾಗಿ ನಿದ್ದೆಯ ತೀವ್ರತೆ

ಪೆಟ್ಟಾಗಿ ಒಬ್ಬಿಬ್ಬರು ದೋವ್ ಎಂಬ ಸಪ್ಪಳ ಮಾಡಿ ಬೀಳುತ್ತಿದ್ದುದೂ ಇತ್ತು. 'ಪಾಠ ಭಂಗಿತ'ರಾದ ಮೇಷ್ಟ್ರು.

ನೀವೆಲ್ಲ ಓದಿ, ಕಡಿದ ಕಟ್ಟೆ ಹಾಕಿ ದೇಶ ಕಟ್ಟೋರು. ಶುದ್ಧ ಕುಂಭಕರ್ಣನ ಕುಲದವರು. ನಿದ್ದಂಡಿ ವಂಶದವರು.........ಎಂದೆಲ್ಲ ಸಾಹಿತ್ಯಿಕ ಭಾಷೆಯಲ್ಲಿ ಮಂಗಳಾರತಿ ಮಾಡುತ್ತಿದ್ದರೆ ನಾವೆಲ್ಲ 'ನಿದ್ರಾಭಂಗಿತ'ರಾಗಿ ಅವರ ಮುಖವನ್ನೇ ಪಿಳಿ ಪಿಳಿ ನೋಡುತ್ತ ಮುಚ್ಚ ಹೊರಟ ಕಣ್ಣನ್ನು ಎಳೆದೆಳೆದು ಬಿಚ್ಚುತ್ತ ಒದ್ದಾಡು ತ್ತಿದ್ದೆವು. ಅಂತಹ ಸೊಗಸಾದ ನಿದ್ರೆಯ ಅಮಲು–ಸೆಳೆತಗಳು ತಿಪ್ಪೇಶಿ ಮೇಷ್ಟ್ರಿಂದ ನಾನು ದೂರಾದ ಬಳಿಕ ನನ್ನ ಬಳಿ ಸುಳಿದೇ ಇಲ್ಲ.

ಹೈಸ್ಕೂಲಿನಲ್ಲಿ ನನಗೆ ಸಿಕ್ಕವರು ರಂಗಾಚಾರ್ಯ ಮೇಷ್ಟ್ರು. ಪಂಪ ರನ್ನರ ಬಗೆಗೆ ಸಾಭಿನಯ ಪಾಠ ಮಾಡುತ್ತ ಸಾಹಿತ್ಯ ಸಾಗರದಲ್ಲಿ ನಮ್ಮನ್ನು ಉಸಿರು ಕಟ್ಟುವ ತನಕ ಮುಳುಗಿಸಿ, ಏಳಿಸಿ ಮಾಡುತ್ತಿದ್ದ ಮಹಾನುಭಾವರು. ತುಂಬ ತನ್ಮಯರಾಗಿ ಪಾಠ ಮಾಡುತ್ತಿದ್ದ ಅವರಿಗೆ ನಮ್ಮ ಅಸ್ತಿತ್ವ ಮರೆತೇ ಹೋಗುತ್ತಿತ್ತು ಎಂಬುದು ನಮಗೆ ತಿಳಿದಿತ್ತಾದ್ದರಿಂದ ನಾವು ನಮ್ಮಷ್ಟಕ್ಕೆ ಮನೆಯಿಂದ ತಂದ ಗೋಡಂಬಿ ಬೀಜ, ಹಲಸಿನ ಬೀಜ, ನೆಲ್ಲಿ ಕಾಯಿಗಳನ್ನು ಮೆಲ್ಲಗೆ ವಿನಿಮಯ ಮಾಡಿ ಕೊಂಡು ತಿಂದು ಮುಗಿಸುವಷ್ಟರಲ್ಲಿ ಪಾಠವೂ ಮುಗಿಯುತ್ತಿತ್ತು. ಅಂದು ರನ್ನನ ಗದಾಯುದ್ಧ ಪಾಠ ನಡೆಯುತ್ತಿತ್ತು. ಹುಡುಗಿಯೊಬ್ಬಳು ತಂದ ಚಕ್ಕುಲಿಗಳನ್ನು ನಾವು ನಾಲ್ಕೆಂಟು ಹುಡುಗಿಯರು ಹಂಚಿಕೊಂಡು ಬಾಯೊಳಗಿಟ್ಟಾಗಿತ್ತು. ರನ್ನನ ಸಾಹಿತ್ಯದಲ್ಲಿ ಮುಳುಗಿದ್ದ ಮೇಷ್ಟರಿಗೆ ನಮ್ಮೀ ಚಕ್ಕುಲಿ ಭಕ್ಷಣಕಣ್ಣಿಗೆ ಬೀಳಲಾರದೆಂಬ ಧೈರ್ಯದಿಂದ ಕೆಲವರು ಕುಟುಂ ಕುಟುಂ ಎಂದು ಸಪ್ಪಳ ಮಾಡಿ ತಿನ್ನತೊಡಗಿದ್ದರು. ಭೀಮ ದುರ್ಯೋಧನರು ಗದೆ ಬಳಸಿ ಯುದ್ಧ ಮಾಡುವ ದೃಶ್ಯವನ್ನು ವಿವರಿಸು ತ್ತಿದ್ದರು ಮೇಷ್ಟ್ರು.

ದಪ್ಪರಿ ದಟ್ಟಾಂ ಪೊಟ್ಟೆನೆ
ದ್ದೊಪ್ಪ ಧೊಗಪ್ಪೆನೆ ದಿಧಿಲ್ ಬುಧಿಲ್ಲೆನೆ ಮೆಯ್ಗಳ್
ಸೊಪ್ಪು ಸೊವಡಪ್ಪಿನಂ ಸೂಳ್
ತಪ್ಪದೆ ಕಡುಕಯ್ದು ಪೊಯ್ದರೋರ್ವರನೋರ್ವರ್.

ಹೀಗೆ ವೀರರಸ ಹರಿಯುತ್ತಿತ್ತು. ಪಾಠ ಹೇಳುತ್ತಿದ್ದ ಮೇಷ್ಟ್ರು ಒಮ್ಮೆಲೆ ನಿಲ್ಲಿಸಿ, ನಮ್ಮತ್ತ ತಿರುಗಿ,

"ಅಕಟಕಟಾ ! ಅನೇನದು ಕಟ ಕಟಾ ?"

ಎಂದರು. ಅದೂ ಸಹ ಪದ್ಯದ ಒಂದು ಸಾಲೇ ಎಂದು ಭಾವಿಸಿದ ನಾವು ಯಥಾ ಪ್ರಕಾರ ನಮ್ಮ ಕಾಯಕ ಮುಂದುವರಿಸಿದ್ದೆವು. ಆದರೆ ನಮ್ಮ ಚಕ್ಕುಲಿಯನ್ನು ಕಣ್ಣಾರೆ ಕಂಡೂ ಆಸೆಪಟ್ಟು ಸಿಟ್ಟು ಬಂದ ಗಂಡು ಹುಡುಗರು,

"ಸಾರ್ ಹುಡ್ಗೀರು ಚಕ್ಕುಲಿ ತಿಂತಿದಾರೆ ಸಾರ್"
ಎಂದು ಕೂಗಿದಾಗಲೇ ನಮಗೆ ಎಚ್ಚರ. ಈ ಬಾರಿ ಮೇಷ್ಟ್ರು,

"ಏನಮ್ಮ ಅಗು ಕಟ ಕಟಾ ?" ಎಂದು ನಮ್ಮನ್ನೇ ಕೇಳಿದಾಗ "ಏನೂ ಇಲ್ಲ" ಎಂದು ಉತ್ತರಿಸಲು ಒಂದು ಹುಡುಗಿಯ ಬಾಯಾದರೂ ತೆರೆದಿದ್ದರೆ ತಾನೆ? ತಲೆ ತಗ್ಗಿಸ್ಸಿದೆವು.

ಹುಡುಗರಿಗೆ ಕ್ಲಾಸಿನಲ್ಲಿ ನಿದ್ದೆಯನ್ನು ಸಂಭಾಳಿಸಿಕೊಳ್ಳುವದು, ಪಾಠವನ್ನು ಕೇಳುವದು ಹೀಗೆ ಇಬ್ಬಗೆಯ ಕೆಲಸವಾದರೆ ಮೇಷ್ಟ್ರುಗಳದ್ದು ಪಾಠ ಒದರುವ ಒನ್ ವೇ ಟ್ರಾಫಿಕ್. ಹುಡುಗರ ಕಣ್ಣುಗಳು ಶೂನ್ಯದಲ್ಲಿ ನೆಟ್ಟಿದ್ದರೂ ಕಿವಿಗಳಿಗೆ ಮಾತ್ರ ಕ್ಲಾಸ್ ಬೆಲ್ಲು ಹೊಡೆಯುವದನ್ನು ಆಲಿಸುವ ಕಾತರ. ವಿದ್ಯಾರ್ಥಿಗಳ ಈ ಸ್ಥಿತಿಯನ್ನು ಮೇಷ್ಟ್ರುಗಳು ಆಸಕ್ತಿಯಿಂದ ಪಾಠ ಕೇಳುತ್ತಿದ್ದಾರೆಂದು ಭಾವಿಸಿ, ತಮ್ಮ ಕಾಯಕ ಮುಂದುವರಿಸುತ್ತಾರೆ.

ವ್ಯಾಕರಣದ ಪಾಠ ನಡೆದಿತ್ತು. ನಾಮ, ಸರ್ವನಾಮ, ನಾಮ ವಿಶೇಷಣ, ಕ್ರಿಯಾಪದ ಇತ್ಯಾದಿ ಕಡಲೆಗಳನ್ನ ಉದುರಿಸುತ್ತಿದ್ದ ಮೇಷ್ಟ್ರ ಬೆಲ್ಲಾದರೂ ಪಾಠ ನಿಲ್ಲಿಸಲಿಲ್ಲ. ಹುಡುಗರು ಪಿಸಿ ಪಿಸಿ ಎಂದರು. ಗುಸು ಗುಸು ಎಂದರು. ಇಲ್ಲ, ಪಾಠ ನಿಲ್ಲಲ್ಲಿಲ್ಲ. ಹುಡುಗನೋರ್ವ ಧೈರ್ಯವಹಿಸಿ "ಬೆಲ್ಲಾಯ್ತು ಸಾರ್" ಎಂದ.

"ಗೊತ್ತು ಕಣ್ರೋ, ಮುಂದಿನ ಕ್ಲಾಸಿನ ಮೇಷ್ಟ್ರ ರಜೇಲಿದಾರೆ. ಈ ಕ್ಲಾಸನ್ನೂ ನಾನೇ ತೆಗೆದುಕೊಳ್ಳೋದು" ಎಂದರು. ಪಾಠ ಮುಂದುವರಿಯಿತು. ಶಿಷ್ಯ ಸಂಕುಲ ಹತಾಶಗೊಂಡಿತು ; ಪಾಠ ಮುಂದುವರಿದಿತ್ತು. ಶಿಷ್ಯ ಸಂಕುಲ ಬಸವಳಿಯಿತು ; ಪಾಠ ಮುಂದುವರಿದಿತ್ತು ಶಿಷ್ಯ ಸಂಕುಲ ಆಕಳಿಸಿತು ; ಪಾಠ ಮುಂದುವರಿದಿತ್ತು. ಶಿಷ್ಯ ಸಂಕುಲ ತೂಕಡಿಸಿತು ; ಪಾಠ ಮುಂದುವರಿದಿತ್ತು. ಶಿಷ್ಯ ಸಂಕುಲ ಚಡಪಡಿಸಿತು ; ಪಾಠ ಮುಂದುವರಿದಿತ್ತು. ಶಿಷ್ಯ ಸಂಕುಲದ

ತಾಳ್ಮೆ ಕೆಟ್ಟಿತು ; ಪಾರ ಮುಂದುವರಿದಿತ್ತು. ಶಿಷ್ಯ ಸಂಕುಲ ಜೀವನದಲ್ಲಿಯೇ ಆಸಕ್ತಿ ಕಳೆದುಕೊಂಡು ಅಳುವುದೊಂದೇ ಉಳಿಯಿತು ; ಪಾರ ಮುಂದುವರಿದಿತ್ತು.

ನಡುವೆ ಒಮ್ಮೆ ಪುಸ್ತಕದಿಂದ ತಲೆ ಎತ್ತಿದ ಮೇಷ್ಟ್ರು, "ಈಗ ಯಾವುದಾದರೂ ಒಂದೇ ವಾಕ್ಯಕ್ಕೆ ಪ್ರಶ್ನಾರ್ಥಕ ಚಿಹ್ನೆಯನ್ನೂ, ಉದ್ಗಾರವಾಚಕಚಿಹ್ನೆಯನ್ನೂ ಬಳಸಿ, ಎರಡು ವಾಕ್ಯ ಹೇಳಿ ನೋಡೋಣ" ಎಂದರು.

ಇಷ್ಟು ಹೊತ್ತು ಅನುಭವಿಸಿದ ಹಿಂಸೆ ಓರ್ವ ಚೋಟಿ ಹುಡುಗನ ಬಾಯಲ್ಲಿ ಉತ್ತರ ರೂಪವಾಗಿ ಬಂತು.

"ನಾವು ಯಾಕೆ ಬದುಕಿದ್ದೇವೆ ?"
"ನಾವು ಯಾಕಾದರೂ ಬದುಕಿದ್ದೇವೆಯೋ !"
ಮೇಷ್ಟ್ರು ಪುಸ್ತಕ ಮುಚ್ಚಿದರು ಎಂದು ಹೇಳಬೇಕಾಗಿಲ್ಲವಷ್ಟೆ ?



"ಪಕ್ಕದ್ಮನೆ ಹುಡ್ಗಿ ಶೋಭ ಇವನ್ನ ಮದ್ವೆ ಮಾಡ್ಕೋತೀನಿ ಅಂತ ಹೆದರಿಸ್ತಿದಳಂತೆ, ರೀ. ನೀವಾದ್ರೂ ಕೊಂಚ ಹೇಳಬಾರ್ದೆ ?"

"ಗೋಡೆಯ ಮೇಲಣ ಕನ್ನಡಿಯೇ...... ನೀ ಹೇಳ್"

—ಶೀನೂ

'ಸ್ವಪ್ನ ಸಮಾಧಿ' 'ಅಂತರ್‌ಮುಖತೆ' ಇವೆಲ್ಲ ಪ್ರತಿಯೊಬ್ಬರಿಗೂ ಅನುಭವ ವೇದ್ಯವಾದ ವಿಷಯಗಳೇ. ಕೆಲವರು ಭಾಥ ರೂಮಿನಲ್ಲೊ ಅಥವಾ ಇನ್ನೆಲ್ಲೊ ಸಮಾಧಿ ಸ್ತರಾದರೆ, ಇನ್ನು ಹಲವರು ಭಾಷಣ ಕೇಳುವಾಗಲೋ ಇಲ್ಲವೇ ಆಫೀಸಿನಲ್ಲಿ ಕೆಲಸ ಮಾಡುವಾಗಲೋ ಈ ಸಮಾಧಿ ಸ್ಥಿತಿಯನ್ನು ಹೊಂದುತ್ತಾರೆ. ಈ ಸಮಾಧಿ ಚಟಕ್ಕೆ ಶುದ್ಧ ಕನ್ನಡದಲ್ಲಿ "Day dreaming" ಎನ್ನುತ್ತಾರೆ.

ನಾನು ಚಿಕ್ಕವನಿದ್ದಾಗ ಲೆಕ್ಕದ ಮೇಷ್ಟ್ರು ಕ್ಲಾಸಿನಲ್ಲೂ, ತುಸು ದೊಡ್ಡವನಾಗಿ ಚಾಕರಿ ಪ್ರಾರಂಭಿಸಿದ ಮೇಲೆ ಬಾಸನಿಂದ ಬೈಗಳು ತಿನ್ನುವಾಗಲೂ, ಆ ಮೇಲೆ ಮದುವೆಯಾದ ಮೇಲೆ ಹೆಂಡತಿಯಿಂದ "ನ್ಯಾಗಿಂಗ್" ಮಾಡಿಸಿಕೊಳ್ಳುವಾಗಲೂ, ಮಕ್ಕಳಾದ ಮೇಲೆ ಅವರಿಂದ "ರ್‍ಯಾಗಿಂಗ್" ಮಾಡಿಸಿಕೊಳ್ಳುವಾಗಲೂ ಈ ಅಸ್ತ್ರವನ್ನು ಅದೆಷ್ಟೋ ಸಲ ಬಳಸಿದ್ದೇನೆ.

ನಿಮಗಿಷ್ಟವಿಲ್ಲದ ಪ್ರಸಂಗವನ್ನೋ, ಬೇಡಾದ ಪರಿಸರವನ್ನೋ, ಅಥವಾ ಅಪ್ರಿಯವಾದ ಕಹಿಸತ್ಯವನ್ನೋ ಮರೆಮಾಚಲು ಇದೊಂದು ಒಳ್ಳೆಯ ಸಾಧನ.

ಆದರೆ ಅತ್ಯಂತ ಸುಖಮಯವಾದ ಸ್ವಪ್ನ ಸಮಾಧಿಯನ್ನು ಅನುಭವಿಸಲು ಗಂಡಸರಿಗೆ "ಹೇರ್ ಕಟಿಂಗ್ ಸಲೂನ' ಗಿಂತ ಚನ್ನಾದ ಸ್ಥಳ ಬೇರಿಲ್ಲವೆಂದೇ ಹೇಳಬೇಕು

ಇತ್ತೀಚೆಗೆ ಹೆಂಗಸರಿಗೆ ಕೂಡ ಈ ಸುಖ, ಈ ಸೌಲಭ್ಯ ದೊರಕಿದೆಯೆಂದು ಕೇಳಿದ್ದೇನೆ. ಸರಿ. ಸಂತೋಷ ಎಂದು ಹೇಳಲೇಬೇಕು. ಅಷ್ಟಲ್ಲದೇ ನೀವೇನಾದರೂ ಹಳೇ ಕಂದಾಚಾರದ ಮಾತನಾಡಿದಿರೋ... ...

"ತಾಳಿಕೊಳ್ಳುವ ತಾಳಿಯಿದ್ದರೆ,
ಗಂಡನೆಂಬುವ ಮೂಳನಿದ್ದರೆ,
ಬದುಕಿ ಬಾಳುವ ಛಲವೆ ಇದ್ದರೆ,

ಹೆರಳು ಹೋದರೆ ಹಾನಿ ಏನೈ,
ರಗಳೆ ಮಾಡದೆ ಬೊಗಳು ನೀ
ಬಲು ಮರುಳು ಮಾನವನೇ.

ಎಂದು ಭಾಮಿನಿ(ಯರು) ಷಟ್ಪದಿಯಲ್ಲಿ ನಿಮ್ಮನ್ನು ತದಕಿಬಿಟ್ಟಾರು. ಸರಿ. ಈ ಕತೆ ಭಾಮಿನಿಯರದಲ್ಲ. ಭೀಮನದು. ಕೇಳಿ.

* * *

ಮೊನ್ನೆ ಯಾವದೋ ಒಂದು ಸೆಲೂನಿಗೆ ನುಗ್ಗಿ ಕುರ್ಚಿಯಲ್ಲಿ ಹಾಯಾಗಿ ಮೈಚೆಲ್ಲಿ, ನಾಪಿತನ ಕೈಗೆ ತಲೆಯೊಪ್ಪಿಸಿ ಸಮಾಧಿಸ್ಥನಾದೆ. ಸಲೂನ ಸಮಾಧಿಯಲ್ಲಿ ಇನ್ನೊಂದು ಹೆಚ್ಚಳ ಉಂಟು. ಅದೆಂದರೆ, ನಾಪಿತ ತನ್ನ ಕೈಚಳಕ ತೋರುತ್ತಿರ ಬೇಕಾದರೆ, ನೀವು ಎದುರು ಕನ್ನಡಿಯಲ್ಲಿ ನಿಮ್ಮ ಮುಖದ ಸೌಂದರ್ಯವನ್ನು ಸವಿ ಯುತ್ತ, ಅರ್ಧ ನೇತ್ರ ನಿಮೀಲಿತರಾಗಿ ಸ್ವಗತವನ್ನು ಅಂದರೆ silent soliloquy ಯನ್ನು—ಪ್ರಾರಂಭಿಸಬಹುದು.

ಅಂದೂ ಹಾಗೇ ಆಯಿತು.

……ಅಲ್ಲs… ಪಕ್ಕದ ಮನೆ ಪಂಕಜ ಕೂಡ ಅಂಕಲ್ ಅಂತಾಳಲ್ಲ ನನಗೆ. ಏನೋ ಕೆನ್ನೆಯ ಬಳಿ ಒಂದೋ ಎರಡೋ ಕೂದಲು ಬೆಳ್ಳಿಯೊಡೆದಿರಬಹುದು ಅಷ್ಟೆ! ಅಷ್ಟಕ್ಕೆ ಅಂಕಲ್ ? ಏನೋ ಪಾಪ ಅಕ್ಕಪಕ್ಕದ ಚಿಕ್ಕಮಕ್ಕಳು ಹೇಳಿಕೊಳ್ಳುತ್ತವೆ ಎಂದರೆ ಹೇಳಲಿ, ಆದರೆ ಪಂಕಜ ? ತನಗೇ ವಯಸ್ಸು ಮುವ್ವತ್ತು ದಾಟಿ ಮದುವೆ ಯಿಲ್ಲದೇ ಸ್ಕೂಲಲ್ಲಿ ಮೇಡಂ ಆಗಿ ಒದ್ದುಕೊಳ್ಳುತ್ತಿದ್ದಾಳೆ. ಅಂತಹಳು ನನಗೆ ಇನ್ನೂ ಈಗ just ಫಾರ್ಟಿ ದಾಟಿದ ನನಗೆ… ಅಂಕಲ್.

ಏನೋ, ಕಳೆದ ಏಳೆಂಟು ವರುಷಗಳಿಂದ ನನ್ನ ಫಾರ್ಟಿ (forty) ದಾಟು ತ್ತಲೇ ಇದೆ ಆ ಮಾತು ಬೇರೆ. ವಯಸ್ನಲ್ಲೇನಿದೇRss …… ಮೈಕಟ್ಟು, ಮುಖದ ಕಳೆ ಮುಖ್ಯ ಅಲ್ಲವೇ ?………

ಈಗ-ಹಾ-ಈಗ ಕೂದಲೆಲ್ಲ ಹಣೆಯ ಮೇಲೆ ಬಾಗಿ ಬಲಕ್ಕೆ ವಾಲಿದಾಗ ಥೇಟ್-ಥೇಟ್ ದಿಲೀಪಕುಮಾರನ ತರಾನೇ……. 'ಅಂದಾಜ' ಸಿನೇಮಾದಲ್ಲಿ ಡಾಯಿಲಾಗ್ ಹೊಡೀತಾನಲ್ಲ …'ರೀಟಾ ಮೈ ತುಮ್ಹಾರೆ ಬಿನಾ ಜೀ ನಹೀ ಸಕ್ತಾ ……ಹಾ ಹಾಗೇ ಹೂಬೇ ಹೂಬ್ ಹಾಗೇ ಕಾಣ್ತಾ ಇದೀನಿ. ಬಾರೇ,

ಬಂದು ನೋಡೇ, 'ಪಂಕೂ ಮೈ ತುಮ್ಹಾರೆ ಬಿನಾ ಮರ್ ನಹಿ ಸಕ್ತಾ ...ಹಾ-ಹಾ ಒಳ್ಳೇ ಜೋಕು... ಆಯ್ಯೋ ಇವನ್ಯಾವನಪ್ಪ ಹಿಂದಿನ ಸಾಲಿನಲ್ಲಿ ಬಕ್ಕ ತಲೆ ಯುವ ಕೂತಿದ್ದಾನಲ್ಲ. ಯಾಕಾದರೂ ಕ್ಷೌರಕ್ಕೆ ಬರುತ್ತಾರೋ ಇಂತಹವರೆಲ್ಲ ದುಡ್ಡು ದಂಡ......

"ನೂ" ಎಂದೆ ಗಟ್ಟಿಯಾಗಿ.......ಎಂದರೆ ಸಮಾಧಿ ಬಾಹಿರನಾಗಿ.

"ಏನಾಯಿತು ?" ಎಂದ ಕ್ಷೌರಿಕ.

"ಏನಿಲ್ಲಪ್ಪ" ಎಂದೆ.

ಸರಿ ಅವನು ತನ್ನ ಕೆಲಸ ಸುರು ಮಾಡಿದ ನಾನು ನನ್ನದು.

".......ಈಗ ನೋಡು ! ಮುಖವನ್ನು ಎಡಕ್ಕೆ ವಾಲಿಸಿ, ಮೂಗು ಸ್ವಲ್ಪ ಹಿಗ್ಗಿಸಿ, ತುಟಿಗಳನ್ನು ಒಂದಕ್ಕೊಂದು ಒತ್ತಿ, ಗದ್ದವನ್ನು ಮ್ಯಾಕ್ಸಿ ಮಮ್ಮಾಗಿ ಕೆಳಗೆ ಹಿಗ್ಗಿಸಿದರೆ...ಆಹಾ ಥೇಟು ಥೇಟು ಅಷ್ಟಪೈಲು ಮುಖದ ಅಶೋಕ ಕುಮಾರನೇ, ಆಹಾ–ಬಾರೇ ಬಾರೇ ಪಂಕೀ-ಅಂಕಲ್ಲಂತೆ ಅಂಕಲ್ಲು....ಗುಂಡಕಲ್ಲು.

ಹಾಯ್ ಹಲೋ ಅಶೋಕ್............

"ಚಲ್ ಚಲರೇ ಪಂಕಜಾ
ಚಲ್ ಚಲರೇ ಪಂಕಜಾ
ಬಾಜೂ ಮೇ ತೇರಾ ಘರ್
ಕ್ಯಾಕೂ ಲಗೇ ಡರ್..........

ಅರೇ ಇದೇನಿದು ಕನ್ನಡ ನೋಡುವಾ ಎಂದರೆ ಹಿಂದಿನ ಸಾಲಿನವನ ಖಿಲ್ವಾಟ ತಲೆಯೇ ಕಾಣುತ್ತದಲ್ಲ.............

"ಛೆ" ಎಂದೆ ಪ್ರಕಟಿತನಾಗಿ.

"ಏನಾಯಿತು ?" ಎಂದ ಕೆಲಸಿಗ.

"ಏನಿಲ್ಲಪ್ಪ. ಕನ್ನಡಿ ಸ್ವಲ್ಪ ಅಡ್ಜಸ್ಟ್ ಮಾಡಿ ಹಾಕಿಸಿ" ಎಂದೆ.

"ಸರಿ ಸಾ" ಎಂದ.

ಪಂಕ್ತಿ ಶುರುವಾಯಿತು ಆತ್ಮದರ್ಶನ.

... ಹಾ ಈಗ ಈಗ-ಕೂದಲನ್ನೆಲ್ಲ ಮೇಲೆ ಬಾಚಿ Tight ಆಗಿ ಒಕ್ಕಿದರೆ ಹೇಗೆ ಡಿಟ್ಟೊ, ಕ್ಯಾರಿ-ಗ್ರಾಂಟ್‌ತರನೇ ಕಾಣ್ತೇನಲ್ಲ ? ಕಾಲೇಜಿನಲ್ಲಿದ್ದಾಗ ಆ ದರಿದ್ರ ದವಳು ಅಯ್ಯಂಗಾರಿಣಿ ಪಾರಿಜ, ನನಗೆ "ಮೊಂಡ ಮೂಗಿನ ಗುಂಡೂ" ಅಂತ fish pond ನಲ್ಲಿ ಹೇಳಿದ್ದಳಲ್ಲವೇ ಈಗ ಬಾ ಅನ್ನು ಬಂದು ನೋಡಲಿ ಅದಾವ ರಾಜೇಶಖನ್ನಾಗೆ ನನ್ನ ಮುಂದೆ ನಿಲ್ಲುವ ಯೋಗ್ಯತೆಯಿದೆ ...ಬಾರೇ-ಬಾ ಪಾರಿಜ ....ಮೇರಿ ಸಪನೋಕಿ ರಾಣಿ...ಕುಳ್ಳಿ...ಪಾರೀ...ನೀ ......

ಅರೇ ಈ ಓಂದಿನವನ ಗುಂಡು ತಲೆಯೇನು ನನ್ನ ಕನ್ನಡಿ ತುಂಬೆಲ್ಲ ಆಕ್ರಮಿಸಿ ದೆಯಲ್ಲ.

"ಛೇ" ಎಂದೆ ಸಮಾಧಿ ಭಂಗವಾಗಿ.

"ಏನಾಯಿತು?" ಎಂದ ಬಾರ್ಬರ.

"ಏನಿಲ್ಲಪ್ಪ, ಅದೇ ಕನ್ನಡಿ" ಎಂದೆ,

"ಸರಿ ಸಾ" ಎಂದ.

ಮತ್ತೆ ಮರಳಿದೆ ನನ್ನ ಲೋಕಕ್ಕೆ.

......ಅರೇ—ಅರೇ'....ಏನನ್ಯಾಯ ಇದು....ಎಲ್ಲ ಕೂದಲು ಎಡಕ್ಕೆ ಬಾಚಿ ದರೆ ಒಂದೊಂದು ತರ ಸ್ವಲ್ಪ ಜಾನಿವಾಕರೋ...ಕೆಷ್ಟೊ ಮುಕರ್ಜಿಯೋ ಅಥವಾ ಅವ ರಿಬ್ಬರ ಕಾಂಬಿನೇಶನ್ ತರನೋ ಕಾಣ್ತೇನಲ್ಲ. ಛೇ ಬೇಡಪ್ಪ, ಬೇಡಪ್ಪ, ಬಲಕ್ಕೇ ಬಾಚು ಎಂದು ಮೌನವಾಗಿ ಒರಲಿದೆ...

......ಪರವಾಯಿಲ್ಲ ಏನಂತೆ. ಒಳ್ಳೆ ಸೀನಿಯರ್ ಎಕ್ಸಿಕ್ಯೂಟಿವ್ ತರ ಕಳೆ ಬರ್‍ತಾ ಇದೆ... ಕೆನ್ನೆಯ ಬಳಿ ಕೂದಲು ಕೂಡ ಮುಖಕ್ಕೆ ಒಂದು ಘನತೆ ತರ್‍ತಾವೆ ..ಅರೇ ಅರೇ ಈ ಹಿಂದಿನ ಸಾಲಿನ ಬಕ್ಕ-ದೇವಿಡ್ಡೂ-ಯಾಕಾದರೂ ಬಂದಿದಾನೋ ಕ್ಷೌರಕ್ಕೆ-ಅದೂ ಹೋಗಲಿ ಬಂದೂ ಬಂದೂ ಕರೆಕ್ಟಾಗಿ ನನ್ನ ಹಿಂದೆಯೇ ಕೂಡಬೇಕೆ ದರಿದ್ರದವನು........

"ಹೇ" ಎಂದು ಮುಕ್ಕಿದೆ ತಂದ್ರಿಯಿಂದ ಹೊರಬಂದು.

"ಏನಾಯಿತು ?" ಎಂದ ಹಜಾಮ.

"ಏನಿಲ್ಲಪ್ಪ—ಎಂತೆಂತಹವರೆಲ್ಲ ಬರ್‍ತಾರಲ್ಲ ಸಲೂನಿಗೆ" ಎಂದೆ.

"ಏನ್ಮಾಡೋದಕ್ಕಾಗತ್ತೆ–ಸಾ" ಎಂದು ಅವನು ತನ್ನ ಕೆಲಸಕ್ಕೆ ಸಾಗಿದ.

ನಾನು ನನ್ನದಕ್ಕೆ, ಇನ್ನೇನು ನಾನು ಅವನ ಕೆಲಸ ಮಾಡೋದಕ್ಕಾಗತ್ಯೆ ?

'ಈಗಿನ ಕಾಲಕ್ಕೆ ನಲವತ್ತು–ಐವತ್ತು–ಎಲ್ಲಾ ಒಂದು ವಯಸ್ಸೇ ?—ಛೇ ಮುರಾರಜಿಯನ್ನು ನೋಡಿ, ಇನ್ನೂ ಎಳೇನಿಂಬೆ ಹಾಗೆ ಆಡಿಕೊಂಡಿದಾನೆ. ಮೊನ್ನೆ ನಮ್ಮ ಟಾಯಿಪಿಷ್ಟು ತಾರಾ ಏನನ್ನುತ್ತಿದ್ದಳು... 'ಸರ್ ನೀವು ಇನ್ನೂ ಇಪ್ಪತ್ತೈದರ ಯುವಕರಂತೆಯೇ ಕಾಣುತ್ತೀರಿ. ನಿಮಂಗೆ ಫಾರ್ಟಿ ಆಗಿದೆ ಎಂದು ಯಾರು ಹೇಳಿ ಯಾರು' ಪಾಪ, ತಾರಾ ಒಳ್ಳೆಯವಳು. ಅವಳಿಗಿರುವಂತಹ ದೃಷ್ಟಿ–ಕಣ್ಣು–ಸೌಂದರ್ಯ ಪ್ರಜ್ಞೆ....– ಕೇಳಬೇಡಿ. ಊಂ—ಹೂಂ —— ಅಂಕಲ್......ಅಂತೆ ಅಂಕಲ್ ಛೇ, ಈ ಹಿಂದಿನ ಸಾಲಿನ ಮುದುಕನ ಬಕ್ಕ ತಲೆ ಬಿಟ್ಟರೆ ಕನ್ನಡಿಯಲ್ಲಿ ಬೇರೆ ಏನೂ ಕಾಣದಂತಾಗಿದೆ'

ನಾನು "ಹ್ಯಾ ಎಂದು ಕನಸು ಕೊಡವಿ ಮ್ಯೆ ಕೊಸರಿದೆ.

"ಏನಾಯಿತು ?" ಎಂದ ನಾಪಿತ.

"ಅಲ್ಲಯ್ಯಾ, ಅಲ್ಲಿ ಹಿಂದಿನ ಸಾಲಿನಲ್ಲಿ ಒಬ್ಬ ಖಲ್ವಾಟ ಮುದುಕ ಕೂತಿದಾನಲ್ಲ ಅವನಿಗೆ ಸ್ವಲ್ಪ ಸರಿಯಾಗಿ ಜರುಗಿ ಕೂತುಕೊಳ್ಳಲಿಕ್ಕೆ ಹೇಳು" ಎಂದೆ.

ಈ ಸಲ ನಾಪಿತ ಹಿಂದೆ ನೋಡಿ

"ಸಾ ಹಿಂದೆ ಯಾರಿಲ್ಲಲ್ಲ !" ಎಂದ.

"ಅದೇ ಆ ಬಕ್ಕ ತಲೆಯವನಯ್ಯ" ಎಂದೆ.

ಕೆಲಸಿಗ ಸ್ವಲ್ಪ ಗಲಿಬಿಲಿಗೊಂಡ, ಕನ್‌ಫ್ಯೂಸಿತನಾದ, ಕೊನೆಗೆ ಅವನ ಮುಖದ ಮೇಲೆ ಒಂದು ಸಣ್ಣನಗೆ ಹರಡಿ, ಅವನು ತುಸು ಕನ್ನಡಿಯ ಬಳಿ ಬಾಗಿ

"ಇದೇ...........ಸಾ......... ಎಂದ.

"ಹೌದು ಅದೇ"...ಎಂದೆ.

ಅವನು ನನ್ನ ನೆತ್ತಿಗೆ ಕೈತಾಗಿಸಿ "ಇದು ನಿಮ್ಮದೇ ತಲೆಯಲ್ಲವೇ-ಸಾ" ಎಂದು ನಸುನಕ್ಕು "ಹೌದು ಸಾ-ಒಂದೊಂದು ಸಲ ಹಾಗಾಗಿ ಬಿಡುತ್ತೆ. ಮುಂದೆ ಸಾಕಷ್ಟು ಕೂದಲಿದ್ದರೂ ಹಿಂದೆ ನೆತ್ತಿಯೆಲ್ಲ ಬೋಳು ಬೋಳಾಗಿ ಬಿಟ್ಟಿರುತ್ತೆ" ಎಂದ.

ನನಗೆ ಇಡೀ ಸಲೂನು ಬೃಹದಾಕಾರವಾಗಿ ಬೆಳೆದು ಅದರಲ್ಲಿ ಲಕ್ಷೋಪಲಕ್ಷ ಜನತುಂಬಿ, ನನ್ನ ತಲೆಯ ಕಡೆಗೆ ನೋಡುತ್ತ ಗಹಗಹಿಸಿ ನಗುತ್ತಿರುವಂತೆ ತೋರಿತು. ಅಲ್ಲಿಂದ ಓಟ ಕಿತ್ತು, ಮನೆಗೆ ಬಂದು ಹಾಸಿಗೆಯ ಮೇಲೆ ಬಕ್ಕ ಬೋರಲಾಗಿ ಬಿದ್ದು ಬಿಕ್ಕಿ ಬಿಕ್ಕಿ ಅತ್ತೆ. ತಾರಾಮಾರಾ ರೋದಿಸಿದೆ. ಹಿಂದಿ ಚಿತ್ರದ ಹೀರೋಯಿನ್ ಳಂತೆ.

* * *

ಈಗ ನನ್ನ ಮನಸ್ಸು ತತ್ವಜ್ಞಾನದ ಕಡೆಗೆ, ಆಧ್ಯಾತ್ಮದ ಕಡೆಗೆ ವಾಲುತ್ತಿದೆ. ನಿತ್ಯವೂ ಗೀತಾಪಠಣ ಮಾಡುತ್ತಿದ್ದೇನೆ. ಶಂಕರರ 'ಚರ್ಪಟ ಮಂಜರಿ' 'ಯೋಗ ದರ್ಶನ' ಇತ್ಯಾದಿಗಳನ್ನು ಓದಲು ಯತ್ನಿಸುತ್ತಿದ್ದೇನೆ.

ಎಲ್ಲೇ ಆಗಲಿ ವಯಸ್ಸಿನ ಮಾತು ಬಂದರೆ ನನ್ನ ವಯಸ್ಸನ್ನು ಕರೆಕ್ಟಾಗಿ 'ನಾಲವತ್ತೊಂಭತ್ತು ವರ್ಷ ಎಂಟು ತಿಂಗಳು ಹದಿನೈದು ದಿವಸ, ಹದಿನೆಂಟು ಗಂಟೆ' ಎಂದು ಕರಾರುವಾಕ್ಕಾಗಿ ಹೇಳುತ್ತೇನೆ.

ಮೊನ್ನೆ ಪಕ್ಕದ ಮನೆಯ ಪಂಕಜ ಬಂದಿದ್ದಳು. ಅವಳನ್ನು ಕಂಡು ಅಂತಃ ಕರಣದಿಂದ

"ಬಾ ಮಗೂ" ಎಂದೆ.

ಅವಳು ನನ್ನನ್ನು ದುರುದುರು ನೋಡುತ್ತ ಹೊರಗೆ ನಡೆದಳು.



"ಪ್ರತಿ ಶನಿವಾರ ಸಂಜೆ, ಟಿ.ವಿ.ಲಿ ಕನ್ನಡ ಸಿನಿಮಾ ನೋಡಿದ ತಕ್ಷಣ ನಮ್ಮಾಕೆ ವಾಂತಿ ಮಾಡ್ಕೊಳ್ತಾಳೆ. ಏನಾದ್ರೂ ಗುಳಿಗೆ ಕೊಡ್ತೀರಾ ?"

ಏನು ಮಾಡಲಿ ?

ವಿ. ಜಿ. ಭಟ್ಟ
ಕಾವ್ಯ ವೇದನೆಯಿಂದ

ಏನು ಮಾಡಲಿ ವೇಳೆ ಹೋಗದು
ಏತಕೂ ಮನಸಾಗದು

ಕುಳಿತುಕೊಳ್ಳಲೊ ? ಮಲಗಿಕೊಳ್ಳಲೊ ?
ಹೊಡೆದು ಕೊಳ್ಳಲೊ ? ಬೇಡವೊ ?
ಒಂದು ಬಗೆ ಸೆಕೆ; ಅಲ್ಲ, ತುಸು ಚಳಿ
ಹೊರಗೆ ಬಿಸಿಲೋ ಮೋಡವೋ ?

ನಿದ್ದೆ ಮಾಡುವೆನೆಂದರೂ ಸಹ
ಖೋಡಿ ಕಣ್ಣಿವೆ ಕೂಡದು.
ಚಿಂತೆ ನೂರಾರಿದ್ದರೂ ಈ-
ಗೊಂದು ಕೂಡ ಮೂಡದು.

ಓದಲೇ ಪುಸ್ತಕವ ? ಪತ್ರಿಕೆ ?
ಬಂದ ಪತ್ರವನಾದರೂ ?
ಇಂಥ ಹೊತ್ತಿಗೆ ಹರಟೆಹೊಡೆಯಲು
ಬರಲಿ ಕಡು ಹಗೆಯಾದರೂ

ಬೀಡಿ ಸಿಗರೇಟೊಂದನೂ ಜಟ-
ಮಾಡಿಕೊಳ್ಳದೆ ಕೆಟ್ಟೆನು
ಈಗ ಸೇದಲೆ ? ಹೋಗಿ ತರುವವ
ರಾರು ಬೀಡಿಯ ಕಟ್ಟನು ?

ಆಗಲೇ ನಾ ರಾಯಭಾರಿಯು
ಸಹರದಾ ಮರುಭೂಮಿಗೆ ?
ಅಥವಾ ಸ್ಟಾಲಿನ್ ಮೀಸೆಗೆ ಹುರಿ–
ಹಾಕಿ ಬರಲೇ ರೂಮಿಗೆ ?

ಅನ್ನ ಪ್ರಶ್ನೆಯ ಬಿಡಿಸಲೇ ? ನೀ–
ರನ್ನು ಮಂದಿಗೆ ಕುಡಿಸಲೇ ?
ಬಾಂಬುಗಳ ಅಗಿಹಾಕಲೇ ? ಕಾ
ಶ್ಮೀರದಾಚೆಗೆ ನೂಕಲೇ ?

ಗಾಂಧಿ ಚರಕವ ಹಿಡಿಯಲೇ ?ಅವ–
ನಂತೆ ಸತ್ಯವ ನುಡಿಯಲೇ ?
ಜಿನ್ನನಂತೆ ಸಿಡಿಯಲೇ ? ಟ್ರೂ–
ಮನ್ನನಂತೆ ಕಿಡಿಯಲೇ ?
ಅಥವ, (ಸದ್ಯಕೆ ಆಸರಾಗಿದೆ)
ಮಡಿಕೆ ತಣ್ಣೀರ್ ಕುಡಿಯಲೇ ?

ಕೊರಿಯಾ ರಂಗಕೆ ಧಾವಿಸಿ
ಬಿದ್ದ ಹೆಣಗಳ ಹೊರಲಿಯಾ ?
ದೂರವಾಯಿತು. ಏನು ಮಾಡಲಿ ?
ಬಾರಿಸಲೆ ಈ ಮುರಲಿಯಾ ?

ಏನು ಮಾಡಲಿ ವೇಳೆ ಹೋಗದು
ಏತಕೂ ಮನಸಾಗದು
ಇಷ್ಟು ಗೀಚಿದ ಮೇಲೆ ಸಹ ಒಂ–
ದಿಷ್ಟು ಜೊಂಪೂ ಏರದು
ಆಕಳಿಕೆಯೂ ಬಾರದು.

ಮಲತಾಯಿ

—ಬಿ. ಎಸ್. ಚಂದ್ರಶೇಖರ್

ಬೆಳಗಿನ ಪೇಪರ್ ತೆರೆದರೆ ವಾಚಕರವಾಣಿಯಲ್ಲಿ ಇಬ್ಬರಿಗೆ ಮಲತಾಯಿಯ ಕಾಟ. ಮೊದಲನೆಯ ಪುಟದಲ್ಲೇ ಐದು ರಾಜ್ಯಗಳ ಮಂತ್ರಿಗಳಿಂದ ಮಲತಾಯಿಯ ಪ್ರಸ್ತಾಪ. ಆರನೆಯ ಪುಟದಲ್ಲಿ ಹನ್ನೆರಡು ಸಂಘ ಸಂಸ್ಥೆಗಳಿಂದ ಮಲತಾಯಿ ವಿರುದ್ಧ ಹೋರಾಟಕ್ಕೆ ನಿರ್ಧಾರ. ಈ ಪ್ರಮಾಣದಲ್ಲಿ ಮಲತಾಯಿಯರು ಇದ್ದಾರೆ ಎಂದು ನನಗೆ ಗೊತ್ತೇ ಇರಲಿಲ್ಲ.

ನನ್ನ ಈ ಅಜ್ಞಾನಕ್ಕೆ ಮುಖ್ಯ ಕಾರಣ ನನಗೆ ತಿಳಿದವರ ಪೈಕಿ ಒಂದು ಮದುವೆಯ ಅನುಭವವಾದ ಮೇಲೂ ಮತ್ತೆ ಮದುವೆಯಾಗುವ ಧೈರ್ಯವಂತರು ಅಥವ ದಡ್ಡರು ಯಾರೂ ಇಲ್ಲದಿರುವುದು ಎಂದು ಕಾಣುತ್ತೆ. ನೇರವಾಗಿ ಮಲ ತಾಯಿಯನ್ನು ನೋಡಿಲ್ಲವಾದರೂ ಕತೆಯಲ್ಲಂತೂ ಓದಿದ್ದೆನಲ್ಲ. ಭಕ್ತ ಧ್ರುವ ತನ್ನಪ್ಪನ ತೊಡೆಯ ಮೇಲೆ ಕುಳಿತುಕೊಳ್ಳಲು ಚಿಕ್ಕಮ್ಮ ಬಿಡಲಿಲ್ಲ ಎಂದು ಕಾಡಿಗೆ ಹೋದನಂತೆ. ಆ ಕತೆ ಕೇಳಿದಾಗ, ಧ್ರುವ ಹಾಗೂ ಅವನ ಬಲತಮ್ಮ ಬೆಸಸಂಖ್ಯೆಯ ತಾರೀಕುಗಳಂದು ಒಬ್ಬ, ಸರಿಸಂಖ್ಯೆಯ ತಾರೀಕುಗಳಂದು ಇನ್ನೊಬ್ಬ ಅವರಪ್ಪನ ತೊಡೆಯ ಮೇಲೆ ಕುಳಿತುಕೊಳ್ಳತಕ್ಕದ್ದು ಎಂದು ಏರ್ಪಾಡು ಮಾಡಿಕೊಳ್ಳಬಹು ದಾಗಿತ್ತು ಎಂದು ಹೊಳೆದಿತ್ತು. ನನ್ನಂತಹವನಿಗೂ ಹೊಳೆದ ಈ ಯೋಜನೆ ಆಸ್ಥಾನದಲ್ಲಿದ್ದ ಮಹಾ ಮಹಾ ಪಂಡಿತರಿಗೆ ಯಾಕೆ ಹೊಳೆಯಲಿಲ್ಲವೋ ಗೊತ್ತಿಲ್ಲ.

ನಾನು ಹಿಂದೆ ನೋಡಿದ್ದ ಒಂದು ಸಿನಿಮಾದಲ್ಲಿ ಮಲತಾಯಿ ತನ್ನ ಸವತಿಯ ಮಗಳಿಗೆ ಒಂದು ರಾಶಿ ಪಾತ್ರೆ ತೊಳೆಯಲು ಆಜ್ಞಾಪಿಸುತ್ತಾಳೆ. ಆ ಪಾತ್ರೆ ನೋಡಿದಾಗ ಇಷ್ಟೊಂದು ಪಾತ್ರೆಯಲ್ಲಿ ಏನೇನು ಅಡಿಗೆ ಮಾಡಿರಬಹುದು. ಅಷ್ಟೊಂದು ಅಡಿಗೆ ಮಾಡಲು ಹಣವಿದ್ದರೂ ನೌಕರರಿಲ್ಲವೆ ? ಇಷ್ಟೊಂದು ಪಾತ್ರೆ ತೊಳೆಯುವಷ್ಟು ಅವರ ಮನೆಯ ನಲ್ಲಿಯಲ್ಲಿ ನೀರು ಬರುತ್ತದೆಯೆ ? ಇತ್ಯಾದಿ ಪ್ರಶ್ನೆಗಳೆದ್ದು, ಆ ಸಿನಿಮಾ ಕತೆಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗದೇ ಹೋಯಿತು.

ಹೆಚ್ಚು ಪ್ರಸಿದ್ಧವಾದ ಸಿಂಡ್ರೆಲಾ ಕತೆಯಲ್ಲಿಯೂ ಮಲತಾಯಿ ಬರುತ್ತಾಳೆ.

ಆದರೆ ಬಲ್ಲಿ ಇಲಿಗಳು ಕುದುರೆಗಳಾಗುವಂತೆ, ಕುಂಬಳಕಾಯಿ ಸಾರೋಟು ಆಗುವಂತೆ ಮಲತಾಯಿ ಕಾಟ ಸಹ ಒಂದು ಅತಿರಂಜನೆ ಎಂದೇ ತಿಳಿದಿದ್ದೆ.

ಆದರೆ ಈಗ ಸ್ವಲ್ಪ ವರ್ಷಗಳ ಹಿಂದೆ ನಮ್ಮ ರಾಜ್ಯದ ನಾಯಕರು ಕೇಂದ್ರದ ಮಲತಾಯಿ ನೀತಿ ಬಗೆಗೆ ಹೇಳಿದಾಗಿನಿಂದ ಮಲತಾಯಿ ವಿಚಾರದಲ್ಲಿ ನನಗೆ ತೀರಾ ಗೊಂದಲವಾಗುತ್ತದೆ. ನಾನು ಭಾರತ ಜನನಿಯ ತನುಜಾತೆ ಕರ್ನಾಟಕ ಮಾತೆ ಎಂದೇ ನಂಬಿದ್ದವನು. ಆದರೆ ಈ ಜನಪ್ರಿಯ ನಾಯಕರು ಹೇಳುತ್ತಿರುವುದು ನಿಜವೇ ಇರಬೇಕು. ಹಾಗಾದರೆ ಕರ್ನಾಟಕ ಮಾತೆ ಭಾರತ ಜನನಿಯ ಮಲ-ತನುಜಾತೆಯೆ ? ಇಲ್ಲಿರಬಹುದಾದ ಅರಿಸಮಾಸ ದೋಷ ಬಿಟ್ಟರೂ, ಕರ್ನಾಟಕ ಮಲಮಗಳಾದರೆ ಇನ್ನೊಬ್ಬ ಹೆಂಡತಿಯ ಮಕ್ಕಳುಗಳು ಯಾರು ಇತ್ಯಾದಿ ಅನೇಕ ಪ್ರಶ್ನೆಗಳು ಎದ್ದಿದ್ದವು. ಈ ಪ್ರಶ್ನೆಗೆ ಉತ್ತರ ಕೊಡಬಹುದಾಗಿದ್ದವರು ಬೆಳಗಿನ ಜಾವ ಮಾತ್ರ ಸಂದರ್ಶನ ಕೊಡುತ್ತಿದ್ದರಂತೆ. ಆ ಸಮಯದಲ್ಲಿ ಆ ದೂರದ ಜಾಗಕ್ಕೆ ಹೊರಟರೆ ದರೋಡೆಕಾರರಿರಲಿ, ಬೀದಿ ನಾಯಿಗಳು ಬಿಟ್ಟಾವೆಯೆ ಎನ್ನುವ ಸಂಶಯ ಬಂದು ಪ್ರಶ್ನೆಗೆ ಉತ್ತರ ಪಡೆಯುವ ವಿಚಾರ ಕೈಬಿಡಬೇಕಾಯಿತು.

ಮುಂದೆ ನಮ್ಮ ರಾಜ್ಯ ಸರ್ಕಾರಿ ನೌಕರರಿಗೆ ವಿಪರೀತ ಮಲತಾಯಿ ಕಾಟ ಶುರುವಾಗಿದೆ ಎಂದು ಪ್ರತಿ ದಿನ ತಿಳಿಯುತ್ತಿತ್ತು. ಹಂಗಾಮಿ ನೌಕರರು ಸರಕಾರ ತಮ್ಮತ್ತ ಮಲತಾಯಿ ಧೋರಣೆ ತಾಳಿದೆ. ಹತ್ತು ವರ್ಷ ಕೆಲಸ ಮಾಡಿದರೂ ಮುಂದೇನು ಎನ್ನುವ ಖಾತರಿಯಿಲ್ಲ ಎಂದು ಒಂದು ದಿನ ಹೇಳಿಕೊಂಡರೆ, ಸ್ಟೈಪೆಂಡರಿಗಳು ಮಾರನೆಯ ದಿನ ಸಭೆ ನಡೆಸಿ ಮಲತಾಯಿ ಧೋರಣೆಯನ್ನು ಖಂಡಿಸುತ್ತಿದ್ದರು. ಅವರ ಹಿಂದೆ ಸ್ಥಳೀಯ ಅಭ್ಯರ್ಥಿಗಳು, ಈ ಪಕ್ಕದಲ್ಲಿ ಗುತ್ತಿಗೆ ನೌಕರರು, ಇನ್ನೊಂದು ಕಡೆ ಪಾರ್ಟ್ ಟೈಂ ಉದ್ಯೋಗಿಗಳು, ಇನ್ನೊಂದು ಭಾಗದಲ್ಲಿ ದಿನ ಗೂಲಿಯವರು, ಮತ್ತೊಂದು ಕಡೆ ಬಡ್ತಿಯಾಗಿ ಬಂದವರು, ಮಗುದೊಂದು ಕಡೆ ಪಿ.ಎಸ್.ಸಿ. ಮಂದಿ. ಎಲ್ಲರೂ ಮಲತಾಯಿ ಧೋರಣೆ ಪ್ರತಿಭಟಿಸುವವರೆ. ಇಷ್ಟೊಂದು ಜನರಿಗೆ ಮಲತಾಯಿ ಹಿಂಸೆಯಾದರೆ ಆ ಗಂಡನಿಗೆ ಎಷ್ಟು ಜನ ಹೆಂಡತಿಯರು ? ಅರ್ಥ ಮಾಡಿಕೊಳ್ಳಲು ನನ್ನಂತಹ ಸಾಮಾನ್ಯನಿಗೆ ಸಾಧ್ಯವಾಗಲಾರದು ಎಂದು ಆ ವಿಷಯ ಅಲ್ಲಿಗೆ ಕೈಬಿಟ್ಟಿದ್ದೆ.

ಮತ್ತೆ ಈಚೆಗೆ ವೆಂಕಟಸ್ವಾಮಿ ಆಯೋಗ ಸಂಬಳ ಹೆಚ್ಚಿಸಿದಾಗ ಮಲತಾಯಿಯೂ ಮತ್ತೆ ಸೋಲೆ ಬಂದಿದ್ದಾರೆ. ಪ್ರಾಥಮಿಕ ಶಾಲೆ ಅಧ್ಯಾಪಕರಿಗೆ ಮತ್ತು ತಮಗೆ ಒಂದೇ ಸ್ಕೇಲು ಕೊಟ್ಟಿದ್ದು ಮಲತಾಯಿ ನೀತಿ ಎಂದು ಮೊದಲನೆಯ

ದರ್ಜೆಯ ಸಹಾಯಕರು ಹೇಳುತ್ತಾರೆ. ದನದ ಡಾಕ್ಟರುಗಳು ಮಲತಾಯಿ ಮಕ್ಕಳಾಗಿದ್ದಾರೆ, ಜನದ ಡಾಕ್ಟರು ಅನುಕೂಲ ಪಡೆದಿದ್ದಾರೆ ಎಂದು ಇನ್ನೊಂದು ಕೂಗು. ಪ್ರಿನ್ಸಿಪಾಲರಿಗೆ ಡೆಪ್ಯುಟಿ ಕಮೀಷನರ್ ಸಂಬಳ ಕೊಡದೇ ಇರುವುದು ಮಲತಾಯಿ ಧೋರಣೆ ಎಂದು ಮತ್ತೊಂದು ಕಡೆ ಕೂಗು. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ಗಳು, ಬಾಯ್ಲರ್ ನೋಡಿಕೊಳ್ಳುವ ಅಧಿಕಾರಿಗಳು, ರೇಷ್ಮೆ ಹುಳುಗಳಿಗೆ ಔಷಧ ಕೊಡುವವರು, ಹುಲಿಗಳಿಗೆ ಆಹಾರ ಕೊಡುವವರು, ಜೈಲಿನಲ್ಲಿ ಪಹರೆ ಮಾಡುವವರು, ಪೊಲೀಸ್ ವ್ಯಾನ್‌ಗಳನ್ನು ಓಡಿಸುವವರು ಎಲ್ಲರೂ ಮಲತಾಯಿಯವರನ್ನು ಕಾಣುತ್ತಿರುವಾಗ ಸರ್ಕಾರಕ್ಕೆ ಶ್ರೀ ಕೃಷ್ಣನ ಹಾಗೆ ಅರವತ್ತು ಸಾವಿರ ಜನ ಹೆಂಡರೆ ? ಎನ್ನುವ ಅನುಮಾನ ಬರುತ್ತಿದೆ.



"ಕಂಪ್ಯೂಟರುಗಳ ಮೇಲೆ ಕೇವಲ ಹದಿನೈದು- ಪರ್ಸೆಂಟ್ ತೆರಿಗೆ !
ಬಡಬಗ್ಗರ ಉದ್ಧಾರಕ್ಕೆ ಇನ್ನೇನು ಬೇಕು ?"

ಜನಪ್ರಿಯ ವಿಜ್ಞಾನ—ಅಣು ಬಾಂಬ್

— ಶಿವು

ಅಮೆರಿಕಾದ ಹತ್ತಿರ ಬೇಕಾದಷ್ಟು ಇದೆ. ರಷ್ಯಾ ಹತ್ತಿರ ಕಡಿಮೆಯೇನಿಲ್ಲ. ಪಾಕಿಸ್ತಾನದ ಹತ್ತಿರ ಖಂಡಿತ ಇದೆ ಅಂತ ರಾಜೀವ್ ಹೇಳಿದರೆ, ಇಲ್ಲವೇ ಇಲ್ಲ ಅಂತ ಜಿಯಾ ಸಾಧಿಸುತ್ತಿದ್ದಾರೆ. ದಿನ ಬೆಳಗಾದರೆ ಪತ್ರಿಕೆಗಳಲ್ಲಿ ಇದೇ ಸುದ್ದಿ. ಇದೇನು ಅಂತ ನೀವು ಈಗಾಗಲೇ ಊಹಿಸಿರಬೇಕಲ್ಲವೇ ? ಕರೆಕ್ಟ್. ಇದೇ ಅಣು ಬಾಂಬ್. ಅಣು ಬಾಂಬ್ ಬಗ್ಗೆ ಅಪರಂಜಿ ಓದುಗರಿಗೆ ಸ್ವಲ್ಪ ಮಾಹಿತಿ ನೀಡಿ ನಿರೋಚನೆಯಿಂದಿರುವವರನ್ನ ಸ್ವಲ್ಪ ಮಟ್ಟಿಗಾದರೂ ಚಿಂತಾಕ್ರಾಂತರನ್ನಾಗಿ ಮಾಡುವ ಸದುದ್ದೇಶದ ಫಲ—ಈ ಬರಹ.

ಅಣುವಿನ ಬಗ್ಗೆ ತಿಳಿಯದೇ ಅಣು ಬಾಂಬ್ ವಿಷಯ ಅರ್ಥ ಮಾಡಿಕೊಳ್ಳುವುದು ಅಸಾಧ್ಯ. ನಾವು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ, ಕೆಮಿಸ್ಟ್ರಿ ಮೇಷ್ಟ್ರು ಕೃಷ್ಣಮಾಚಾರ್ಯರು ಅಣುವನ್ನ ವಿವರಿಸುತ್ತಿದ್ದುದು ಹೀಗೆ

"ಒಂದು ಸೀಮೆ ಸುಣ್ಣ ತೆಗೆದುಕೊಂಡು, ಮಧ್ಯಕ್ಕೆ ಸರಿಯಾಗಿ ಮುರಿದರೆ ಎರಡು ಚೂರಾಗುತ್ತದೆ. ಒಂದು ಚೂರನ್ನು ಇನ್ನೂ ಅರ್ಧ ಮಾಡಿದರೆ, ಮತ್ತೆರಡು ತುಂಡುಗಳು ಉಂಟಾಗುತ್ತವೆ. ಇದೇ ರೀತಿ ಅರ್ಧ ಮಾಡುತ್ತಾ ಹೋದರೆ, ಕೊನೇಗೆ ವಿಭಜಿಸಲಾಗದಂತಹ ಪರಿಸ್ಥಿತಿ ಬರುತ್ತದೆ. ಅದೇ ಅಣು"

ಈ ಪಾಠ ಕೇಳಿ ನನ್ನ ಸಹಪಾಠಿ ಒಕ್ಕಪ್ಪ, ಅಣು ಎಂದರೆ ಸೀಮೇ ಸುಣ್ಣದ ತುಂಡು ಅಂತ ಹೇಳಿ ಪರೀಕ್ಷಕರನ್ನ ಬೆರಗುಗೊಳಿಸಿದ್ದು ನೆನಪಿದೆ.

ಇದೇ ಕೃಷ್ಣಮಾಚಾರ್ಯರು ಅಣುವಿನ ಬಗ್ಗೆ ಮುಂದಿನ ಪಾಠದಲ್ಲಿ "ಅಣುವಿನ ವಿಭಜನೆ ಬಹಳ ಕಷ್ಟ. ಆದರೆ ವಿಭಜಿಸಿದರೆ ಸ್ಫೋಟದೊಡನೆ ಅಗಾಧವಾದ ಶಕ್ತಿ ಹೊರ ಹೊಮ್ಮುತ್ತದೆ" ಅಂತ ಅಣು ಬಾಂಬಿನ ತತ್ವದ ಬಗ್ಗೆ ಸರಳವಾಗಿ ತಿಳಿಸಿದ್ದರು. ಒಕ್ಕಪ್ಪನದು ಅತೀ ವೈಜ್ಞಾನಿಕ ಮನೋಭಾವ. ಯಾವುದನ್ನೂ ಸ್ವತಃ ಪರೀಕ್ಷಿಸದೇ

ನಂಬಬಾರದು ಎಂಬುದು ಆವನ ಸಿದ್ಧಾಂತ. ಪಾಠ ಕೇಳಿದ ನಂತರ ಊಟದ ಬಿಡುವಿನಲ್ಲಿ ಕೆಮಿಸ್ಟ್ರಿ ಪ್ರಯೋಗ ಶಾಲೆಯಲ್ಲಿ ಅಣು ಬಾಂಬ್ ಪ್ರಯೋಗ ನಡೆಸಿ ಬಿಡುವುದೆಂದು ನಿರ್ಧರಿಸಿದ. ಬೆಂಬಲಕ್ಕೆ ಅವನ ಜೊತೆಗೆ ನಾನಿರುವುದೂ ತೀರ್ಮಾನವಾಯಿತು. ಬೇಗ ಬೇಗ ಕ್ಯಾರಿಯರ್ ಊಟ ಮುಗಿಸಿ, ಪ್ರಯೋಗಶಾಲೆಗೆ ತೆರಳಿದೆವು. ಬೇಕಾದ ಅತಿ ಮುಖ್ಯ ಕಚ್ಚಾ ಸಾಮಗ್ರಿ (ಸೀಮೆ ಸುಣ್ಣದ ಡಬ್ಬ !) ಮೇಜಿನ ಮೇಲಿತ್ತು. ನೂರು ಕಡ್ಡಿಗಳಿದ್ದ ಡಬ್ಬ ಅದು. ಬಕ್ಕಪ್ಪ ಒಂದು ಕಡ್ಡಿ ತೆಗೆದು ಮೇಷ್ಟ್ರು ಹೇಳಿದಂತೆ ಎರಡು, ನಾಲ್ಕು, ಎಂಟು, ಹದಿನಾರು ತುಂಡುಗಳನ್ನು ಮಾಡುತ್ತಾ ಹೊರಟ. ಅಣು ಸಿಗುವವರೆಗೂ ತುಂಡು ಮಾಡಿ, ನಂತರ ಅದನ್ನು ಒಂದು ಕಲ್ಲಿನಿಂದ ಹೊಡೆದು ವಿಭಜಿಸಿ ಸ್ಫೋಟ ನೋಡುವ ಗುರಿ ಬಕ್ಕಪ್ಪನದು. ಅದಕ್ಕೋಸ್ಕರ ಆಟದ ಮೈದಾನದಿಂದ ಒಂದು ಕಲ್ಲನ್ನೂ ತಂದಿದ್ದ. ಕಲ್ಲಿನಿಂದ ಎಷ್ಟು ಕುಟ್ಟಿದರೂ ಬಿಳೀ ಹಿಟ್ಟಾಯಿತೇ ವಿನಹ, ಅಣು ಸಿಡಿಯಲೇ ಇಲ್ಲ. ಡಬ್ಬದಲ್ಲಿನ ಸೀಮೇಸುಣ್ಣಗಳೆಲ್ಲಾ ಖಾಲಿಯಾಗುತ್ತಾ ಬಂದವು. ಕೊನೇ ಕಡ್ಡಿಯನ್ನು ಕುಟ್ಟುವ ಹೊತ್ತಿಗೆ ಸಾಕ್ಷಾತ್ ಕೃಷ್ಣಮಾಚಾರ್ಯರೇ ಅಲ್ಲಿಗೆ ಆಗಮಿಸಿದರು. ಪ್ರಯೋಗಶಾಲೆಯೆಲ್ಲಾ ಬಿಳೀ ಧೂಳಿನಿಂದ ತುಂಬಿದ್ದನ್ನು ನೋಡಿ ಕೋಪದಿಂದ "ಯಾರೋ, ಅದು !" ಅಂತ ಘರ್ಜಿಸಿದರು. ತದೇಕ ಚಿತ್ತದಿಂದ ವೈಜ್ಞಾನಿಕ ಗುರಿಯನ್ನು ಸಾಧಿಸ ಹೊರಟಿದ್ದ ಬಕ್ಕಪ್ಪನಿಗೆ ಅಣು ಬಾಂಬೇ ಸಿಡಿದಂತಾಯಿತು. ನಂತರ ಮೇಷ್ಟರು ನಮ್ಮಿಬ್ಬರನ್ನೂ ಒದ್ದು ಹೊರಗಟ್ಟಿದರು ಅನ್ನಿ. ಅಣು ಬಾಂಬಿನೊಡನೆ ಇದು ನನ್ನ ಪ್ರಥಮ ಸಮಾಗಮ.

ಅಣು ಬಾಂಬಿನ ಚರಿತ್ರೆ ಭಾರತೀಯರಾದ ನಮಗೆ ಬಹು ಪುರಾತನ. ಮೊಟ್ಟ ಮೊದಲ ಬಾರಿಗೆ ಇದನ್ನು ಖಾಂಡವ ವನದಲ್ಲಿ ಪ್ರಯೋಗಿಸಲಾಯಿತಂತೆ. ಖಾಂಡವ ದಹನದ ಬಳಿಕ ಅಲ್ಲಿನ ಪಶು ಪಕ್ಷಿಗಳ ಸ್ಥಿತಿ, ಬಿಕಿನಿ ಅಟಾಲಿನಲ್ಲಿ ಅಣು ಬಾಂಬ್ ಸಿಡಿದ ನಂತರ ಕಂಡು ಬಂದ ಪ್ರಾಣಿ ವರ್ಗದ ಸ್ಥಿತಿಗೆ ಬಹು ಮಟ್ಟಿಗೆ ಹೋಲುವುದೆಂದು ತಜ್ಞರು ನಿರ್ಧರಿಸಿದ್ದಾರೆ. ಮಹಾ ಪುರುಷರ ಪುಣ್ಯ ಭೂಮಿಯಾದ ನಮ್ಮ ನಾಡಿನಲ್ಲಿ, ವೇದಗಳ ಕಾಲದಿಂದಲೇ ಅಣು ಬಾಂಬು, ವಿಮಾನ, ಹೆಲಿಕಾಪ್ಟರ್, ಕಂಪ್ಯೂಟರ್ ಎಲ್ಲವೂ ತಿಳಿದಿತ್ತೆಂಬುದನ್ನು ಯಾರೂ ಅಲ್ಲಗಳೆಯಲಾರರು. ಸಂದೇಹವಿದ್ದರೆ ವೈಜ್ಞಾನಿಕ ಚರಿತ್ರಕಾರ ಓಕ್ ಮಹಾಶಯರನ್ನು ಧಾರಾಳವಾಗಿ ಕೇಳಬಹುದು.

ಅಣು ಬಾಂಬಿನ ರಚನೆ ಬಹು ಸರಳ. ಇದಕ್ಕೆ ಮುಖ್ಯವಾಗಿ ಬೇಕಾದದ್ದು ಒಂದು ಬಟ್ಟಲು. ಸ್ಪರ್ಧೆಗಳಲ್ಲಿ ಗೆದ್ದಾಗ ಕೊಡುವ ಬಹುಮಾನದ ಬಟ್ಟಲಿನ

ಆಕಾರದ್ದು, (ಚಿತ್ರ ನೋಡಿ.) ಇದಕ್ಕೊಂದು ಗುಬುಟಿನ ಆಕಾರದ ಮುಚ್ಚಳ ಹೊಂದಿಸಬೇಕು. ಇವೆರಡನ್ನೂ ಹೊಂಚಿದ ನಂತರ ಅಣುಗಳನ್ನು (ಒಳ್ಳೇ



ಸೀಮೇಸುಣ್ಣದಿಂದ ತಯಾರಿಸಿರಬೇಕು) ಬಟ್ಟಲಿನೊಳಗೆ ಭದ್ರವಾಗಿ ತುಂಬ ಬೇಕು. ನಂತರ ಮುಚ್ಚಳ ಬಿಗಿಯಾಗಿ ಹಾಕಿದರೆ ಬಾಂಬ್ ಸಿದ್ಧ. ವಿಮಾನದಲ್ಲಿ ಮೇಲೆ ಹೋಗಿ. ಇದನ್ನ ನೆಲಕ್ಕೆ ಅಪ್ಪಳಿಸಿದರೆ ಒಂದು ಅಣು ಒಡೆದು, ಅದರ ಚೂರುಗಳು ಇನ್ನೊಂದು ಅಣುವನ್ನು ಒಡೆದು, ಅದರ ಚೂರುಗಳು ಮತ್ತೊಂದನ್ನು ಚೂರು ಮಾಡಿ ...ಒಟ್ಟಿನಲ್ಲಿ ಸರಪಳಿ ಕ್ರಿಯೆ ನಡೆದು ಮಹಾ ಸ್ಫೋಟವಾಗುವುದು ನಿಸ್ಸಂದೇಹ. ಒಂದು ವೇಳೆ ಸಿಡಿಯದಿದ್ದರೆ ಸರಪಳಿ ಸೇವೆಯಂತೂ ಖಂಡಿತ.


ಅಣು ಬಾಂಬಿನ ಉಪಯೋಗಗಳು ಬಹಳ ಮುಖ್ಯವಾಗಿ ಹೆಸರಿಸಬೇಕಾದರೆ, ಬಾಂಬ್ ಉಳ್ಳವರು ಮಾತ್ರ ನ್ಯೂಕ್ಲಿಯರ್ ಕ್ಲಬ್ಬಿನ ಸದಸ್ಯರಾಗಬಹುದು. ಯಾವ ಕ್ಲಬ್ಬಿಗೆ ಸದಸ್ಯತ್ವ ಸಿಕ್ಕುವುದೂ ಅತೀ ದುಸ್ಸಾಧ್ಯವಾದ ಇಂದಿನ ದಿನಗಳಲ್ಲಿ ನ್ಯೂಕ್ಲಿಯರ್ ಕ್ಲಬ್‌ಗೆ ಸೇರುವುದು ಪ್ರತಿಷ್ಠೆಯ ಮಾತೇ ಅಲ್ಲವೆ !

ಬಾಂಬ್ ಹೊಂದುವುದರ ಇನ್ನೊಂದು ಉಪಯೋಗ ನೆರೆ ರಾಷ್ಟ್ರದಿಂದ ಕ್ರಿಕೆಟ್ ಟೆಸ್ಟ್ ವೀಕ್ಷಣೆಗೆ ಆಹ್ವಾನ ಗಳಿಕೆ. ನೀವು ಕ್ರಿಕೆಟ್ ಫ್ಯಾನ್ ಆಗಿದ್ದರೆ, ಬಾಂಬ್ ಹೊಂದುವ ಹೆಚ್ಚಳ ನಿಮಗೇ ತಿಳಿದಿರುತ್ತದೆ.

ಬಾಂಬ್ ಹೊಂದುವುದರಲ್ಲಿ ಒಂದೇ ಅನಾನುಕೂಲವೆಂದರೆ, ಆಗಾಗ್ಗ ಬಾಂಬನ್ನು ಸಿಡಿಸುತ್ತಲೇ ಇರಬೇಕು. ಪರೀಕ್ಷಾ ಸಿಡಿತವೆಂದು ಕರೆಯುವ ಈ ಅಗತ್ಯ ಚೌಡಿ ಸಾಕಿಕೊಂಡಿರುವವರ ಪರಿಸ್ಥಿತಿಯನ್ನು ನೆನಪಿಗೆ ತರುತ್ತದೆ. ಚೌಡಿಗೂ ಬಾಂಬ್‌ನಂತೆ ಆಗಾಗ್ಗ ಕೆಲಸ ಕೊಡುತ್ತಲೇ ಇರಬೇಕು. ಇಲ್ಲದಿದ್ದರೆ ಅದು ನಿಮ್ಮ ಮೇಲೇ ಎರಗುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಚೌಡಿ ಅಂದರೆ ಏನು ಅಂದಿರಾ ?......ದಯವಿಟ್ಟು ಈ ಉಪಮೆಯನ್ನು ಮರೆತುಬಿಡಿ.

ಒಟ್ಟಿನಲ್ಲಿ ಹೇಳುವುದಾದರೆ, ಈಗ ಭೂಲೋಕದಲ್ಲಿರುವ ಅಣು ಬಾಂಬ್‌ಗಳೆಲ್ಲಾ ಒಟ್ಟಿಗೇ ಸಿಡಿದರೆ, ಸಮಸ್ತ ಭೂಮಂಡಲದ ಜೀವಿಗಳು ಇನ್ನೂರು ಪಟ್ಟು

ನಾಶವಾಗುವುದು ಖಚಿತ. ಇನ್ನೂರು ಪಟ್ಟು ನಾಶ ಏಕೆ ? ಒಮ್ಮೆ ನಾಶವಾದರೆ, ಸರ್ವನಾಶವಲ್ಲವೆ ಅಂತ ಜೋರಾಗಿ ಕೇಳಬೇಡಿ. ತಲೆ ಕೆಟ್ಟಿದೆ ಅಂತ ಹುಚ್ಚಾಸ್ಪತ್ರೆ ಸೇರಿಸಿಬಿಟ್ಟಾರು.



"ಸದ್ಯ ನೀನು ಬಂದ್ಯಲ್ಲಾ ! ಒಬ್ಬೇ ಇದ್ದು ಬೇಜಾರಾಗ್ತಾ ಇತ್ತು."

"ಟ್ಯಾಕ್ಸ್ ರೇಯಿಡ್"

—ಸೂರಿ

ನಿಜನೇ. ಹಿಂದಿನ ರಾತ್ರಿ ವರಮಾನ ತೆರಿಗೆಯುವರು ರೇಯಿಡ್ ಮಾಡಿದ್ದಾರೆ, ಆ ಸಂದರ್ಭದಲ್ಲಿ ಕಟ್ಟಿಕೊಂಡ ಗಂಡ ಚೆನ್ನಾಗಿ ತದಕಿಸ್ಕೊಂಡು behind locked doors ಇದಾರೆ. ಅಂದ್ರೆ ಯಾವ ಹೆಂಗಸಿಗೇ ಆಗಲಿ ಬೇಜಾರಿನ ವಿಷಯುವೇ. ಆದ್ರೆ ನಮ್ಮ ಜೇಯುಮ್ಮ ರಾಜಾರಾಯರ ಹೆಂಡತಿ ಸರೋಜಾ ಅವರ ವರ್ತನೆ ಸ್ವಲ್ಪ ವಿಚಿತ್ರಾನೆ ಅನಿಸ್ತು. ನಾನು ಯಾವುದೇ ಪ್ರಶ್ನೆ ಕೇಳಲಿ—"ನಿನ್ನೆ ರಾತ್ರಿ tax-raid ಆಯಿತಂತೆ ?" "ಯಾವುದೋ ಡಾಕ್ಯುಮೆಂಟ್ ಸಿಗ್ತೂ ಅಂತ ಹೇಳಿ subjected to confinement ಅಂತೆ ?"—ಅವೆಲ್ಲಕ್ಕೂ ಅವರ monosyllabic ಉತ್ತರ "ಹೂ" ಅನ್ನೋದು ಒಂದೇನೆ. ನನಗೆ ಒಂದು ರೀತಿ ಬೇಜಾರೇ ಆಯಿತು—ಅಲ್ಲ, ಏನೋ ನಮ್ಮ ಬಾಸು, ತೊಂದರೇಲಿದಾರೆ ಅಂತ ಬಂದ್ರೆ, ಈಕೆ ನೋಡಿದ್ರೆ ಹೀಗೆ.

ಆದ್ರೆ ಹಾಗೇ ಅಂತ ಹೇಳಿ ಸುಮ್ಮನೇ ಇರಕ್ಕೆ ಆಗುತ್ಯೆ ? ಎರಡು ನಿಮಿಷ ಹಾಗೇ ಅಳೆದೂ ಸುರಿದೂ ಮತ್ತೆ ಹೇಳಿದೆ.

"ಪಾಪ, ರಾಜಾರಾವ್ ಅವರಿಗೆ ಈ ಥರಾ ಅನ್ಯಾಯ ಆಗಬಾರದಿತ್ತು."

ಆದ್ರೆ ಅದಕ್ಕೆ ಆಕೆಯಿಂದ ಬಂದ ಪ್ರತಿಕ್ರಿಯೆಗೆ ನಾನು ಖಂಡಿತಾ ಸಿದ್ಧನಾಗಿರಲಿಲ್ಲ.

"ಸದ್ಯ ದೇವರ ಹಾಗೆ ಬಂದ್ರೂ ಅಂತ ಹೇಳಬೇಕು, ಈ tax ನವರು. ಇಲ್ದೇ ಇದ್ರೆ ನಿಮ್ಮ ರಾಜಾರಾಯರು ಮಾಡ್ತಾ ಇದ್ದ ಮನೆ ಹಾಳು ಕೆಲ್ಸ ಬಯಲಿಗೆ ಬರ್ತಾ ಇರ್ಲಿಲ್ಲ."

"ನೀವು ಏನು ಹೇಳ್ತಾ ಇದ್ದೀರಿ ಅನ್ನೋದು ಅರ್ಥವಾಗ್ಲಿಲ್ಲ, ಮೇಡಂ"

"ಆ ಡಾಕ್ಯುಮೆಂಟ್ ಅಂತ ಹೇಳಿದ್ರಲ್ಲ ಅದು ಸಿಕ್ಕಿದ್ದು ನನಗೆ, ಅವ್ರು ಒದೆ

ತಿಂದದ್ದು ನನ್ ಕೈನಲ್ಲಿ: ಮತ್ತೆ—ಅವರನ್ನ ಉಗ್ರಾಣದಲ್ಲಿ ರಾತ್ರಿಯಿಂದ ಕೂಡಿ ಹಾಕಿರೋದೂ ನಾನೇನೆ—ಈಗ ಅರ್ಥವಾಯ್ತಾ ?"

ಯಾಕೋ ಮಾಮಲೆ ನಾನು ಅಂದುಕೊಂಡು ಬಂದಷ್ಟು ಸಾಫ್ ಸೀದಾ ಇಲ್ಲ ಅಂತ ಅನಿಸ್ತು. ಹಾಗೇ ಅಂತ ಹೇಳೊಕ್ಕೆ ಬಾಯಿ ತೆಗೆಯೋ ಹೊತ್ತಿಗೆ ಆಕೇನೆ ಸಮಜಾಯಿಷಿ ಕೊಟ್ಟರು.

"ಟ್ಯಾಕ್ಸಿನವರು ಬಂದು ಹೋದ್ಮೇಲೆ ನನ್ನ ಕೈಗ್ ಸಿಗ್ತು, ಇವ್ರ ಬ್ರೀಫ್ ಕೇಸಲ್ಲಿದ್ದ ಈ ಕಾಗದ. ಮೊದಲನೇ ಲೈನ್ ಓದಿ, ಆ ಮೇಲೆ ಕಡೇ ಪ್ಯಾರಾ ಓದಿ. ಎಲ್ಲಾ ಗೊತ್ತಾಗತ್ತೆ. ಪೂರಾ ಕಗ್ಗ ಓದ್ದೋದೇನೂ ಬೇಡ.

ಸುಮಾರು ಎಂಟು ಪೇಜಿನಷ್ಟಿನ ಆ ಕಾಗದ "ಚೆಲುವಿನ ಗೆಳತಿ ಸಲಮಾ" ಅಂತ ಶುರುವಾದದ್ದು, "ನೀನು ಹುಂ ಅಂದ್ರೆ ಸಾಕು, ಇವಳನ್ನ ಅವರಮ್ಮನ ಮನೇಗೆ ಓಡಿಸಿ ನಿನ್ನ ಕೈಲಿ ನನ್ ಮನೆ ರಾಜ್ಯಭಾರ ವಹಿಸ್ತೇನೆ" ಅಂತ ಅನ್ನೊ ಒಕ್ಕಣೇಲಿ ಮುಗಿದಿತ್ತು. ನಂಬೋಕೇ ಆಗದ ವಿಷಯ ಅಂದರೆ, ಆ ಕಾಗದ ರಾಜಾರಾಯರ ಅಕ್ಷರದಲ್ಲೇ ಬರೆದದ್ದು—ಅವರ ರುಜು ಇರಲಿಲ್ಲ ಅಷ್ಟೆ

"ಮತ್ತೆ, ಈ ಆದಿ, ಅಂತ್ಯಗಳ ನಡುವೆ, the pages are dripping with honey and syrup......... ನಿಮ್ಮ ಸೀನಿಯರ್ ಆಫೀಸರುಗಳಿಗೆ ಕೈ ತುಂಬಾ ಕೆಲಸಾ ಇಲ್ಲ ಅಂತ ಕಾಣತ್ತೆ. ಹಾಗಾಗೀನೆ ಬಿಡುವಿದ್ದಾಗಲೆಲ್ಲ ಆಫೀಸಲ್ಲಿರೋ ಹುಡುಗೀರಿಗೆ ಹೇಗೆ ಕಾಗದಗಳನ್ನ ಬರೀತಾ ಇರಬಹುದೂ ಅಂತೀನಿ"

ರಾಜಾರಾಯರಿಗೇನೋ ಈ ಆರು ತಿಂಗಳುಗಳಿಂದ ಸರಿಯಾಗಿ ಕೆಲಸವೇ ಇರ್ಲ್ಲಾ ಇಲ್ಲ ಅನ್ನೋದು ನಿಜವಾದ್ರೂ, ಅವರು ಈ ಥರಾ ಕೆಲಸಕ್ಕೆ ಯಾಕೆ ಕೈ ಹಾಕಿದ್ರು ಅನ್ನೋದು ನನಗಂತೂ ಅರ್ಥವಾಗಲಿಲ್ಲ. ಆದರೂ ಸಹ ನಾನು ಅವರನ್ನ ವಹಿಸಿಕೊಂಡೇ ಹೇಳಿದೆ..

"ಛೆ, ಛೆ ಮಿಸ್ಟರ್ ರಾಜಾರಾವ್ ಅಂಥೋರಲ್ಲ ಮೇಡಂ. ಒಂದು ವೇಳೆ ಹಾಗೆ ಬರೀಬೇಕೂ ಅಂತ ಅನಿಸಿದ್ರೆ ಎಲ್ಲಾ ಬಿಟ್ಟು ಮುಂದಿನ ವರ್ಷ ರಿಟೈರಾಗೋರಂತ ಈ ಸಲಮಾ ಬಿಟ್ರೆ ಬೇರೆಯವರು ಸಿಗ್ತಾ ಇರಲಿಲ್ಲವೆ ?"

"ಅಷ್ಟೆಲ್ಲ ವಿವೇಕ ಇರತ್ತೆ ಈ ಗಂಡಸ್ರಿಗೆ ? ಕಟ್ಕೊಂಡ ಹೆಂಡ್ತಿ ಒಬ್ಬಳನ್ನ

ಬಿಟ್ರೆ ಊರಲ್ಲಿರೋ ಬೇರೆ ಹೆಂಗಸ್ರೆಲ್ಲಾ ರಂಭೇರೆ, ಇವ್ರುಗಳ ಕಣ್ಣಿಗೆ."

"ಯಾವ್ದಕ್ಕೂ ದುಡುಕೋದು ಬೇಡ, ಮೇಡಂ. ಮೊದಲು ಉಗ್ರಾಣದ ಬೀಗ ತೆಗೆದು ನಿಮ್ಮ ಯಜಮಾನರ್ನ ಆಚೆ ಕರೀರಿ. ಎಲ್ಲಾ ನಿಧಾನವಾಗಿ ವಿಚಾರಿಸೋಣವಂತೆ.

ನಮ್ಮ ಮುಂದೆ ಬಂದು ಕೂತ ರಾಜಾರಾಯರನ್ನ ನೋಡಿ, ಅಯ್ಯೋ ಅನಿಸ್ತು. ಎಲ್ಲಾ ಬಿಟ್ಟು ಆ ಸಲುವಾಗಿ ಕಾಗ್ದ ಬರೆದು ಒದೇ ತಿಂದ್ರಲ್ಲ. ವೃತಾ ಕೆಟ್ರೂ ಸುಖ ಸಿಗಲಿಲ್ಲ ಅನ್ನೋ ಥರಾ. ರಾತ್ರಿಯೆಲ್ಲ ಉಗ್ರಾಣದಲ್ಲಿ ಇಲಿ ಜಿರಲೆಗೆ ಹೆದರ್ಕೊಂಡು ಜಾಗರಣೆ ಮಾಡಿದ್ರಲ್ಲ.

"ಸ್ವಲ್ಪ ಅವಕಾಶಾ ಕೊಟ್ರೆ ಎಲ್ಲಾನೂ explain ಮಾಡ್ತೇನೆ. ಆ ಮೇಲೆ ನೀವೇ ಅಂತೀರಿ ನಾನು innocent ಅಂತ"—ನನ್ನ ಶಿಫಾರಸು ಮೇಲೆ ಸರೋಜಾ ತಂದು ಕೊಟ್ಟ ಕಾಫೀ ಕುಡೀತಾ ಹೇಳಿದ್ರು ರಾಜಾರಾಯರು.

"ಹಾ, ಹಾ! ... ಅದಕ್ಕೇನೆ ನಿಮ್ಮನ್ನ ಇಲ್ಲಿ ಕರೆದದ್ದು. ಆದ್ರೇ—ಸುಳ್ಳು ಬೊಗಳಿದ್ರೀ ಅಂತಂದ್ರೆ... it is the dog-house again for you," ಒಳ್ಳೇ ಪೋಲೀಸ್ ಇನ್ಸ್‌ಪೆಕ್ಟರ್ ಥರಾ ಗದರು ಹಾಕಿದ್ರು, ಸರೋಜಾ.

ಈಗ ಶುರುವಾಯಿತು, ರಾಜಾರಾಯರ explanation—"ನೋಡಿ, ಮಿಸ್ಟರ್ ಭಾಸ್ಕರ ರಾವ್, ಈಗ ಒಂದು ಆರು ತಿಂಗಳ ಹಿಂದೆ special assignments ಅಂತ ಹೊಸಾ ಡಿವಿಷನ್ ಮಾಡಿ ನನ್ನ ಅಲ್ಲಿಗೆ ಹಾಕಿದ್ರಲ್ಲ ಅದು ಯಾತಕ್ಕೆ ?—ಇನ್ನು ಮೇಲೆ ಕಂಪನಿಗೆ ನನ್ನ service ಅಗತ್ಯ ಇಲ್ಲ ಅಂತ hint ಕೊಡೋಕ್ಕೆ ಅಲ್ಲವೇ ? ಇದ್ದಕ್ಕಿದ್ದ ಹಾಗೆ ನನಗೆ ಕೆಲಸವೇ ಇಲ್ಲದ ಹಾಗೆ ಆಗಿಬಿಟ್ಟು, ಹ್ಯಾಗಪ್ಪಾ ಎಂಟು ಗಂಟೇ ಕಾಲ ಆಫೀಸಲ್ಲಿ ಕಳಿಯೋದು ಅನ್ನೋದೆ ಒಂದು ದೊಡ್ಡ ತಲೆ ನೋವು ಆಗಿ ಹೋಯ್ತು. ಹಾಗೇ ಯೋಚನೆ ಮಾಡ್ತಾ ಇದ್ದಾಗ ಒಂದು ದಿನ idea ಬಂತು—ಅರೆ! ಒಂದು ನಾವೆಲ್ ಬರೆಯೋಕ್ಕೆ ಶುರೂ ಮಾಡಿದ್ರೆ ಹ್ಯಾಗೆ ? ಪಬ್ಲಿಷ್ ಆಗತ್ತೊ ಬಿಡತ್ತೊ ಅದು ಬೇರೆ ಮಾತು, ಆಫೀಸಲ್ಲಿ ಕಡೇ ಪಕ್ಷ ಒಂದು ನಾಲ್ಕು ಗಂಟೆ ಕಾಲಾ ಆದ್ರೂ engage ಆದ ಹಾಗೆ ಇರತ್ತಲ್ಲಾ......ಒಳ್ಳೆ ಅನುಕೂಲವಾದ ರೂಮು, ಗಂಟೆಗೊಂದು ಸಲ ಕಾಫೀ, ಕಂಪನೀ ಖರ್ಚಲ್ಲಿ ಪೇಪರ್ರು, ಯಾರಿಂದಲೂ disturbance ಇಲ್ಲ, ಯಾವ author ಗೆ ಇರತ್ತೆ ಹೇಳಿ ಈ ಅನುಕೂಲ ಎಲ್ಲ ?......

ಈ ಸರೋಜನ್ನ ಕೈಲಿ ಸಿಗ್ತಿಲ್ಲಾ ಆ ಕಾಗದ, ಅದು ಈ ನಾವೆಲ್‌ನಲ್ಲಿ ಒಂದು sequence ಅಲ್ಲಿ ಬರತ್ತೆ ಅಷ್ಟೆ."

"ಯಾರ ಹತ್ರ ಬಿಡ್ತೀರೀ ಈ ಬಂಡಲ್‌ನೆಲ್ಲ ? ಅಷ್ಟು ದಿನಗ್ಳಿಂದ ಬರೀತಾ ಇದ್ದೀರಿ ಅಂದ್ರೆ, ಇಷ್ಟೇನ ಪೇಜು ಆಗಿರೋದು ?"—ಸರೋಜಾ ಅವರನ್ನ ತಡೆದು ಹೇಳಿದ್ರು.

"ಇಲ್ಲ ಆಗ್ಲೇ ಮುನ್ನೂರು ಪೇಜು ಆಗಿದೆ. ಬೇಕೂ ಅಂದ್ರೆ ನಾಳೆ ತಂದು ತೋರಿಸ್ತೇನೆ"

"ಊಹುಂ ಅದೆಲ್ಲಾ ಆಗೊಲ್ಲ. ಈಗಲೇನೆ ಈ ಭಾಸ್ಕರ್‌ರಾಯರ ಕೈಲಿ key bunch ಕಳಿಸಿ, ತರಿಸ್ಕೊಳ್ಳಿ. ನಿಮ್ಮ ಆ ಪ್ರಗಾಢಾನ...ಒಂದ್ವೇಳೆ ನೀವು ಅದನ್ನ ಬರೀತಾ ಇರೋದೇ ಆದ್ರೆ"

"ಹ್ಹಾ, ಹ್ಹಾ. ಅದೆಲ್ಲ ಅಷ್ಟು ಸುಲಭವಾಗಿ ಎಲ್ಲರ ಕೈಯಲ್ಲೂ ಸಿಗೋ ಹಾಗೆ ಇಟ್ಟಿಲ್ಲ Fire insurance ಫೈಲಲ್ಲಿಷ್ಟು, Staff grievances ಫೈಲಲ್ಲಿಷ್ಟು, ಅಂತ ಎಂಟೋ ಹತ್ತು ಫೈಲುಗಳಲ್ಲಿ ಅವನ್ನ ಮುಚ್ಚಿಟ್ಟಿದ್ದೀನಿ.. ಯಾರ ಕೈಗಾದ್ರೂ ಸಿಕ್ಕಿ ನಗೆಪಾಟಲು ಆಗಬಾರದಲ್ಲಾ ಮತ್ತೆ !"

ಸರೋಜಾ ಅವರಿಗೆ ಈಗ ಸ್ವಲ್ಪ ನಂಬಿಕೆ ಬರ್ತಾ ಇದ್ದ ಹಾಗೆ ಕಾಣಿಸ್ತು. ಒಂದು ಥರಾ ಆಸೆಯಿಂದಲೇ ಅಂತ ಅನ್ನಬಹುದು, ನನ್ನ ಕೇಳಿದ್ರು—

"ಇವ್ರು ಹೇಳ್ತಾ ಇರೋದನ್ನ ನಂಬಬಹುದಾ ಮಿಸ್ಟರ್ ಭಾಸ್ಕರ್ ರಾವ್ ?"

"Madam, I am convinced he is speaking the truth."

ಮುಂದೆ ನಡೆದದ್ದು ಏನು ಅಂತ ಹೇಗೆ ಹೇಳಲಿ ? ನಾನು ಅಲ್ಲಿದ್ದೀನಿ ಅನ್ನೋದನ್ನೂ ಮರೆತು ಆಕೆ ತಕ್ಷಣ ಗಂಡನಿಗೆ ತೆಕ್ಕೆ ಬಿದ್ರು.

"Oh, my poor Raja ! ... ನನ್ನ ಈ ಹಾಳು ಕೈ ಸೇದು ಹೋಗಾ ! ಪಾಪ, ಅಷ್ಟೊಂದಾ ನಿಮ್ಮನ್ನ ತದಕೋದು ?"

"ಛೆ, ಛೆ ಹಾಗ್ಯಾಕ್ ಅಂತೀ ಹುಚ್ಚೀ ? .... ನಿನ್ನ ಕೈನಿಂದ ಬಿಸಿ ಬಿಸಿಯಾಗಿ

ಏನ್ ತಿಂದ್ರೂ ಅದು ರುಚಿಯಲ್ವಿ ?"

"ನನ್ನ ಕಾಲಿಗ್ ಹುಳಾ ಬೀಳಾ... ನಿಮಗೆ ಎಲ್ಲೆಲ್ಲೋ ಒದ್ದು ಬಿಟ್ಟೆನಲ್ಲಾ"

"ಅದಕ್ಯಾಕೆ ಸಂಕ್ಟ ಪಡ್ತೀ ಡಿಯರ್...ಇಲ್ನೋಡು, ಅಷ್ಟಾದ್ರೂ ದವಡೇಲಿರೋ ಒಂದು ಹಲ್ಲೂ ಉದುರಿಲ್ಲ !"

"ರಾಜಾ...........! "

"ರೋಜಾ.......... ? "

"ರಾಜಾ ! "

ರೋಜಾ ?"

ಅಲ್ಲ, ಮಾತಿಗೆ ಹೇಳ್ತೀನಿ. ಎಷ್ಟೋ ಜನ ಗಂಡ ಹೆಂಡ್ತೀರು ಮಾರಾಮಾರಿ ಜಗಳಗಳನ್ನ ನನ್ನ ಎದುರಿಗೇನೆ ಆಡಿದ್ದಾರೆ. ಅದೊಂದು ಥರಾ ನೋಡೋಕ್ಕೆ ಮೋಜೇ. ಆದ್ರೆ ಈ ರೀತಿ ಖುಲ್ಲಂ ಖುಲ್ಲಂ ಪ್ಯಾರ್ ಮಾಡ್ತಾ ಇರೋರನ್ನ ನೋಡ್ತಾ ಇರೋದು ನನಗೆ ಇದೇ ಮೊದಲು. ಇವ್ರಗಳ embracing ನನಗ್ಯಾಕೋ embarrassing ಆಗೋಕ್ಕೆ ಹತ್ತಿತು. ಹ್ಯಾಗೂ ಬಂದ ಕೆಲಸ ಆಯಿತಲ್ಲ ಅಂದ್ಕೊಂಡು ಅಲ್ಲಿಂದ ಸ್ಕೈಡ್ ಬಿಟ್ಟೆ.

ಪ್ರೇಮ ಪಕ್ಷಿಗಳು ಗಮನಿಸಿದ ಹಾಗೆ ಕಾಣಲಿಲ್ಲ.

ಮೂರು ದಶಕಗಳ ಹಿಂದೆ......

ದಫೇದಾರ್ ದೇರಣ್ಣೋರು

"ನರಭಕ್ಷಕ"

—ದಾಶರಥಿ ದೀಕ್ಷಿತ್



ಕಟ್ಟಿಕಡೆಯ ಪಕೋಡವನ್ನು ಆನಂದವಾಗಿ ಅಗಿದರು. 'ಅಯ್ಯೋ ನುಂಗಬೇಕಲ್ಲಾ. ಕಂಪು ಬಾಯಿಂದ ಮಾಯವಾಗುವುದಲ್ಲಾ' ಎಂಬ ವ್ಯಥೆ ಒಂದು ಕಡೆ. ಅಗಿದಂತೆ ನುಂಗಿದಾಗ ಹೊಟ್ಟೆ ಬಿಮ್ಮೆನ್ನುವ ತೃಪ್ತಿಯೊಂದು ಕಡೆ. ಹೀಗೆ ಕಷ್ಟದಲ್ಲಿ ಸುಖ ಕಾಣುತ್ತಿದ್ದರು ದ॥ದೇರಣ್ಣೋರು. ಕಡೆಗೊಮ್ಮೆ ಅನಿವಾರ್ಯವಾಗಿ ನುಂಗಿ ಥಳಥಳಿಸುತ್ತಿದ್ದ ಕಂಚಿನ ತಂಬಿಗೆಯನ್ನೆತ್ತಿ ಒಂದೇ ಸಮ ಗಟಗಟನೆ ನೀರನ್ನು ಗಂಟಲಿಗೆ ಸುರಿದುಕೊಂಡರು. ಬಲಗೈಯನ್ನು ನೀರಿನಲ್ಲಿ ಅದ್ದಿ, ಹುಬ್ಬನ್ನೇರಿಸಿ, ಕಣ್ಣನ್ನು ಮುಚ್ಚಿ ಮೀಸೆಯನ್ನು ಒರಸಿಕೊಂಡರು. ಹೊಟ್ಟೆಯನ್ನು ಬಿಗಿದ ಬೆಲ್ಟನ್ನು ಸಡಿಲಿಸಿದರು. ಇದಿಷ್ಟು ಕೆಲಸ ಸಾಂಗೋಪಾಂಗವಾಗಿ ನೆರವೇರುವ ತನಕ ಅವರು ತದೇಕಚಿತ್ತರಾದ ಚಿತಾತ್ಮಜನಂತೆ ಇರುತ್ತಿದ್ದರು. ಸೊಗಸಾದ ಪಕೋಡದ ಕಂಪನ್ನು ಹೊತ್ತುತಂದ ತೇಗೊಂದು ಹೊರಹೊಮ್ಮಿತು. ಮರುಕ್ಷಣವೇ ಆ ಕಂಪಿಗೆ ಮಾರುಹೋದ ಮಾರುತಿರಾಯರಂತೆ ಮುಖ ಅರಳಿದ ಮುತ್ತುಗದ ಹೂವಾಯಿತು. ಶ್ರೀಯುತರು ಸಜ್ಜರು. ನಾನು ಕಿವಿ ಸರಿಪಡಿಸಿಕೊಂಡು ಕುಳಿತೆ ಅವರ ವಾಗ್ಝರಿ ಆಲಿಸಲು.

"ನರಭಕ್ಷಕ" ಎಂದರು. ಹಿರಿದಂತೆ ಮುದುಡಿತು ಅವರ ದೇಹ. ಹಸು ಅರಳಿದ ಗುಲಾಬಿಯು ಗೋಚಲು ಹಾಕಿದ್ದಾ, ಬಂದಿತೇನು ? ಅಲ್ಲ ಸೌ॥ಸಾವಂತ್ರಮ್ಮನವರು ಒಳಗಿಂದ ಹಂಸದಂತೆ ನಡೆದುಬಂದರು, ದಫೇದಾರ್ರು ದಂಗುಬಡಿದ ಕೋಡಂಗಿಯಂತೆ

ಬಿಟ್ಟಬಾಯಿ ನೆಟ್ಟಕಣ್ಣಿಂದ ದೃಷ್ಟಿಯಾಗುವಂತೆ ಆ ಚೆಲುವೆಯನ್ನು ನೋಡುತ್ತಾ ಕುಳಿತರು. ನಿಜಕ್ಕೂ ದೇರಣ್ಣ ಪುಣ್ಯವಂತ. ಇಂತಹ ಸುಂದರ ಹೆಂಡತಿ ಪ್ರೀತಿಯ ಮಗ ಪಡೆದಿದ್ದಾರೆ.

"ಕೂಸು ಮಲಗಿದೆ. ಎದ್ದರೆ ತೂಗಿ...ಅತ್ತರೆ ಅಡಿಗೆಮನೇಲಿ ಹಾಲಿದೆ" ಎಂದು ಹೇಳಿ ಕಳಿತ ಟೊಮೋಟೊವಿನಂತೆ ನಕ್ಕು ಹೊರಟುಹೋದರು ಸೌ॥ ಸಾವಂತ್ರಿ.

ಬಳುಕುವ ಬಳ್ಳಿಯಂತೆ ನಡೆದು ಹೋದ ಸಾವಂತ್ರಮ್ಮನವರನ್ನೇ ನೋಡುತ್ತಾ ಹೇಳಿದರು

"ನರಭಕ್ಷಕ"

"ಯಾರು?"

"ಅವಳೇ"

"ಹಹ್ಹ ಏನೂ ಹೀಗೆ ಹೇಳ್ತಿದ್ದೀರಿ ದಫೇದಾರ್ರೆ."

"ನನ್ನನ್ನು ಪೂರ್ತ ತಿಂದುಹಾಕಿದ್ದಾಳೆ ಆಕೆ.........ಅವಳು ಜೀರ್ಣಸಿಕೊಂಡು ನನ್ನನ್ನ ಹೀಗೆ ಆಟ ಆಡಿಸ್ತಿದ್ದಾಳೆ"

"ಅಲ್ಲ–ದಫೇದಾರ್ರೇ... ಹೊಳಲ್ಕೆರೆ ಸುತ್ತಮುತ್ತ ಸೇರ್ಕೊಂಡು ದನಗಳನ್ನ ಬಿಟ್ಟು ಜನಗಳನ್ನೇ ಆರಿಸಿಕೊಂಡು ತಿನ್ನುತ್ತಿದ್ದ ನರಭಕ್ಷಕ ಹುಲಿ ವಿಚಾರ ಹೇಳ್ತೀನಂತ ಕರೆಸಿದಿರಿ. ಹೇಳ್ತಿರೋದು ಸಾವಂತ್ರಮ್ಮನವರ ವಿಚಾರ."

"ಅವಳೂ ಯಾವ ಹೆಣ್ಣುಹುಲಿಗೂ ಕಡಿಮೆ ಇಲ್ಲಾನ್ನಿ...."

"ಅಂ...ದಫೇದಾರ್ರೆ—ನರಭಕ್ಷಕ ಹುಲಿಗಳು ಅಂದ್ರೆ ಅವು ಈ ಸರ್ಕಸ್ಸಿನ ಹುಲಿ ಹಾಗೆ ತಾನೆ ಇರುತ್ವೆ?"

"ಛೆ, ಅದರ ರೂಪೇ ಒಂದು ನಮೂನಿ ವಿಚಿತ್ರವಾಗಿ ಹೋಗಿಬಿಡುತ್ತೆ........ ಕೆಲವರು ನರಭಕ್ಷಕ ಅಂದ್ರೆ ನರ ಇರಂತ್ತೆ ನೋಡಿ....ಅದೇ ನರಗಳೂ....ಮೈಯಲ್ಲಿ ಇರೋಲ್ವೆ ನರನಾಡಿಗಳೂಂತ ಅಂತಹ ನರಗಳನ್ನೇ ದನಗಳ ಮೈಯಿಂದ ಆರಿಸಿ

ತಿನ್ನೋ ಹುಲಿಗಳು ಅಂತಾರೆ ...ಅದು ತಪ್ಪು ತಿಳುವಳಿಕೆ. ನರ ಅಂದ್ರೆ ನರ—ನರಪೇತಲ—ನರಂ ಮನುಷ್ಯ—ನರಸಿಂಹ..."

"ನರಸಿಂಹ ?"

"ಅವನ್ನೇ ಆ ಹುಲಿ ಹಿಡಿದದ್ದು-ಅದರ ಬಾಯಿಂದ ಅವನನ್ನ ಬಿಡಿಸಬೇಕಾದ್ರೆ ಸಾಕುಸಾಕಾಗಿಹೋಯ್ತು."

"ಓಹೋ ನರಸಿಂಹನ್ನೇ ಭಕ್ಷವಮಾಡ್ತಿತ್ತು ಆ ವ್ಯಾಘ್ರ ಅನ್ನಿ..."

"ನಾನು ಅವನ ಜೊತೆಗಿಲ್ದೆ ಇದ್ದಿದ್ರೆ ಅವನು ಎಂದೋ ಹರೋಹರ ಆಗ್ತಿದ್ದ... ನೀವು ಹುಲಿ ವೇಷದ ಕತ್ತೆ ಕಥೆ ಕೇಳಿದ್ದೀರೋ"

"ಓಹೋ...ಒಂದನೇ ಕ್ಲಾಸಲ್ಲೇ ನಮ್ಮ ಮೇಸ್ಟ್ರು ಹೇಳಿದ್ದರು..."

"ನಾನು ಅದರ ನೀತಿಯನ್ನೇ ಹಿಡಿದು ಕೊಂಚ ಬುದ್ಧಿವಂತಿಕೆ ಉಪಯೋಗಿಸಿ ಕೂಗದೆ ಕೆಲಸ ಸಾಧಿಸಿದೆ."

"ಅರ್ಥವಾಗಲಿಲ್ಲ"

"ಕತ್ತೆ ವೇಷದ ಹುಲಿ ಕಥೆ ಮಾಡಿದೆ "

"ಹ ಹ್ಹ ಸಮಯಸ್ಫೂರ್ತಿ ಇರಬೇಕು "

"ಛೆ .. ಅದು ಕೇವಲ ಸಾಮಾನ್ಯ ಅನುಭವದ ಪ್ರದರ್ಶನ . ಕಾಮನ್‌ಸೆನ್ಸ್‌ನ ಫಲ....ಹೊಳಲ್ಕೆರೆ ಸುತ್ತಾಮುತ್ತ ಒಂದು ನರಭಕ್ಷಕ ಸೇರಿಕೊಂಡು ವಿಪರೀತ ಹಾವಳಿ ಪ್ರಾರಂಭಿಸಿಬಿಟ್ಟಿತ್ತು ಸಂಜೆಯಾದರೆ ಜನ ಹೊರಗೆ ಹೋಗೋಕೆ ನಡುಗೋರು..."

"ನೀವು ಇಷ್ಟೊಂದು ಶಿಕಾರಿ ಮಾಡಿದೋರು ಅದನ್ನ ಹೊಡೆದುಹಾಕೋದು ಕಷ್ಟವಾಗಿತ್ತೆ?"

"ಅದೇ ಅನುಭವವಿಲ್ಲದ ಮಾತು. ಸಾಧಾರಣ ದನಭಕ್ಷಕ ವ್ಯಾಘ್ರಗಳನ್ನು ಕಣ್ಣುಮುಚ್ಚಿಕೊಂಡು ಶಿಕಾರಿಮಾಡಬಹುದು ..ಇದು ನರಭಕ್ಷಕ ಅನ್ನೋದು

ನೆನಪಿನಲ್ಲಿರಲಿ. ಇದಕ್ಕೆ ಬ್ಯಾಟೆ ಏನು ಕಟ್ತಿರಾ... ಹೇಳಿ?...

"ಬ್ಯಾಟೇ...ಅಂದರೇ...

"ಅದೇ ಗೊತ್ತಿಲ್ಲ ನಿಮಗೆ ಬೇಟೆ ಕುರಿ ಅಥವ ಮೇಕೆ ಅಥವ ಕತ್ತೆಯನ್ನ ಕಟ್ಟಿಹಾಕಿ ಅದರ ಹತ್ತಿರದ ಮರದ ಮೇಲೆ ಮೊರಸು ಹಾಕಿ ಕಾದಿರೋದು...ಸುಲಭ ವಾಗಿ ಸಿಕ್ತು ಬೇಟೆ ಅಂತ ಆ ಹುಲಿಗಳು ಬಂದಾಗ ನಾವು ಮೇಲಿಂದ ಗುಂಡಿಟ್ಟು ಡುಂ ಅನ್ನಿಸಿ 'ಕೊಂದುಹಾಕೋದು......ಇದು ಮಾಮೂಲಿ ಹುಲಿ ಶಿಕಾರಿಯ ಸಂಪ್ರದಾಯ... ಆದರೆ ಇದು ನರಭಕ್ಷಕ ಅಂದಮೇಲೆ ಯಾರನ್ನ ಯಜ್ಞಪಶುವನ್ನಾಗಿ ಆರಿಸುವುದು .. ಈಗಿನ ಕಾಲದಲ್ಲಿ ಯಾವ ಶುನಶ್ಯೇಪ ಸಿಕ್ತಾನೆ?

"ಅಂದರೇ ಮನುಷ್ಯಪ್ರಾಣಿಯನ್ನೇ ಬಲಿಯಾಗಿ ಕಟ್ಟಿಹಾಕಿ ಅದನ್ನ ಗುಂಡಿಟ್ಟು ಕೊಲ್ಲಬೇಕೂನ್ನಿ... "

"ಮತ್ತೇ ಅಲ್ಲವೇ. ಈ ನರಮಾಂಸದ ರುಚಿ ಕಂಡ ಹುಲಿ ಬೇರೆ ಯಾವ ಪ್ರಾಣಿಯನ್ನೂ ಮುಟ್ಟಲ್ಲ. ಅದಕ್ಕೆ ಅಸಲ್ ನರಪ್ರಾಣಿಯೇ ಬೇಕು. ಪ್ರಯೋಗಾರ್ಥ ವಾಗಿ ನಾನು ನಮ್ಮ ಪೂರ್ವಿಕರೆಂದು ಪ್ರತೀತಿಯಿರುವ ವಾನರನನ್ನು ಬೇಟೆಯಾಗಿ ಬಂಧಿಸಿಟ್ಟು ಹೊಂಚುಹಾಕಿದೆ, ಉಹುಂ, ಅದು ಮುಟ್ಟಲಿಲ್ಲ. ಮೂಸಿ ನೋಡಿ, 'ಥತ್' ಎಂದು ಎರಡು ಕೂಗು ಹಾಕಿ, ಆರ್ಭಟಿಸಿ ಹೊರಟುಹೋಯಿತು.

"ಹುಂ...ಸರಿ, ಆಮೇಲೆ ?"

"ಆಮೇಲೆ ನಮ್ಮ ಶಾನುಭೋಗರು ಒಂದು ಉಪಾಯ ಹೇಳಿದರು ನಮ್ಮ ಕೇರಿಯ ಹನುಮಂತರಾಯನ್ನ ಯಾಕೆ ಬ್ಯಾಟೆಯಾಗಿ ಕಟ್ಟಬಾರದೂಂತ. ಯಾಕೇಂತಿರೋ? ಅವನು ಮನುಷ್ಯಜಾತಿ ಮೃಗ. ಹೆಂಡ್ತೀನ್ನ ದನಕ್ಕೆ ಹೊಡೆದಹಾಗೆ ರಾಚೋನು. ಮಕ್ಕಳ ಮೂಳೆಗಳೆಲ್ಲಾ ಪುಡಿಪುಡಿ ಅವನ ಹತ್ತಿರ ಜಗಳಕ್ಕೆ ಹೋದರೆ ಆಯ್ತು, ಹುಲಿ ಹಾಗೆ ಎಗರಿ ಸದೆಬಡಿಯುವ. ಪ್ರೀತಿ, ವಿಶ್ವಾಸ, ನಯ ನಾಜೂಕು, ಕರುಣೆ, ಕಕಲಾತಿ ಒಂದೂ ಕೇಳಬೇಡಿ... ಅಂಥಾ ಮನುಷ್ಯ ಊರಿನಲ್ಲಿ ಕಂಟಕವಾಗಿ ರೋಕಿಂತ ಹುಲಿ ಬಾಯಿಗೆ ಆಹುತಿ ಆಗೋದೇ ಮೇಲು ಅಂತ ತೀರ್ಮಾನಿಸಿ ಶಾನು ಭೋಗರು ಈ ತೀರ್ಮಾನಕ್ಕೆ ಬಂದರು..."

"ಅರೆ! ಎಂಥಾ ಜನಾರೀ ನೀವೂ ಅನ್ಯಾಯವಾಗಿ ಆತನ್ನ ಬಲಿಹುಯ್ಯೋದೆ?"

"ಊರಿನ ಹಿತದೃಷ್ಟಿಯಿಂದ ನಾವು ಹಾಗೆ ಮಾಡದೆ ವಿಧಿಯೇ ಇರಲಿಲ್ಲ... ಅನ್ಯಾಯವಾಗಿ ದನಾ ಕಾಯೋ ಹುಡುಗರು ಕಾಡಿನಲ್ಲಿ ಕಟ್ಟಿಗೆ ಕಡಿಯೋ ಕೂಲಿಗಳು ಹುಲಿ ಪಾಲಾಗೋರು...ಇಲ್ಲಿ ಕೇಳಿ ಮುಂದೆ .. ಶಾನುಭೋಗರು ಹನುಮಂತನನ್ನು ಹಿಡಿದು ಕಾಡಿಗೆ ಒಯ್ದು ಹುಲಿಯು ಸುಳಿಯುತ್ತಿದ್ದ ಸುಮಾರು ಜಾಗದಲ್ಲಿ ಮರಕ್ಕೆ ಕಟ್ಟಿಹಾಕಿದರು...... ರಾತ್ರಿ ಹನ್ನೆರಡೂವರೆಕ್ಕಾಲು ಘಂಟೆ. ನಾನು ಮರದಮೇಲೆ ಬಂದೂಕು ಬಾರು ಮಾಡಿ ಕೂತಿದ್ದೀನಿ. ಕೆಳಗಡೆ ಹನುಮಂತರಾಯ ವದ್ದಾಡ್ತಾ ಇದ್ದಾನೆ ಹಸಿದ ಹುಲಿ ಆರ್ಭಟಿಸಿ ಬಂತು. ಏನು ಹೇಳ್ಲಿ ಅದರ ಕಥೇ—ಅದನ್ನ ನೋಡಿದಾಗ ಇದು ಹುಲಿಯೋ ? ಅನ್ನೋ ಸಂದೇಹ ಬರುತ್ತೆ. ಮೈಮೇಲಿನ ಕೂದಲೆಲ್ಲಾ ಉದುರಿಹೋಗಿತ್ತು...ಮುಖದಲ್ಲಿ ವಿಚಿತ್ರವಾದ ಹುಚ್ಚುಕಳೆ. ಮನುಷ್ಯ ರಕ್ತದ ದಾಹ ಹೇಳತೀರದು— ಅದರ ಸ್ವಭಾವ ನೋಡಿ. ಅದು ಮನುಷ್ಯನ ರಕ್ತದ-ರುಚಿ ಕಂಡಮೇಲೆ ಬೇರೆ ಯಾವ ಪ್ರಾಣಿಯನ್ನೂ ಮೂಸೋಲ್ಲ—ಈ ಹುಲಿ ಬಂತು. ಹನುಮಂತರಾಯನನ್ನು ಮೂಸಿನೋಡಿತು—ಅವನೋ ಗಡಗಡ ನಡುಗುತ್ತಾ ಕಿರುಚಲೂ ಬಾಯಿ ಬಾರದೆ ಮೈ ಎಲ್ಲಾ ಬೆವತು ವಿಲಿವಿಲಿ ವದ್ದಾಡುತ್ತಿದ್ದ.

"ಅಯ್ಯೋ ಪಾಪ."

"ಪಾಪವೇನು ಬಂತು...ಅವನಿಗೆ ಆಗ ಅರ್ಥವಾಗಿತ್ತು ತಾನು ಹೆಂಡ್ತಿನ್ನ ಸದೆ ಬಡಿಯುವಾಗ ಅವಳಿಗೆ ಹೀಗೇ ಕಾಣುತ್ತಿದ್ದೆನೆಂದು—ಇರ್‍ಲಿ ಕೇಳಿ ಮುಂದೆ. ಆ ನರಭಕ್ಷಕ ಆಪಾದಮಸ್ತಕ ಹನುಮಂತರಾಯನನ್ನು ನೋಡಿತು. ಮುಖವನ್ನು ನೆಕ್ಕಿತು —ಕತ್ತಿನ ಬಳಿ ಬಾಯಿಯಿಟ್ಟು ಗುಟುರು ಹಾಕಿತು....

"ಆವಾಗ ನೀವು ಗುಂಡಿಕ್ಕಬೇಕಿತ್ತು"

"ಅರೆ ! ಅದು ಹ್ಯಾಗೆ ಸಾಧ್ಯ—ಹನುಮಂತರಾಯ ಹತ್ತಿರವೇ ಇದ್ದ— ಆಕಸ್ಮಾತ್ ಗುಂಡು ಅವನಿಗೆ ತಗುಲಿದರೆ ಅನ್ಯಾಯವಾಗಿ ಅವನು ಸಾಯೋಲ್ಲವೆ?"

ಹ"ಹ್ಹ— ಚೆನ್ನಾಗಿದೆ ನಿಮ್ಮ ಮಾತು—ಅಲ್ರೀ ಹುಲಿ ಬಾಯಿಗೇ ಅವನ್ನ ನೂಕಿದಮೇಲೆ ಆಕಸ್ಮಾತ್ ಗುಂಡು ತಗುಲಿದರೇನೀಗ...

"ಅದೇ ಕಾನೂನು ತಿಳಿಯದವರ ಮಾತು ನೀವು ಆಡ್ತಿರೋದು ... ನಾನು ಗುಂಡಿಕ್ಕಿ ಆ ಹನುಮಂತರಾಯನ್ನ ಕೊಂದರೆ ಖೂನಿ ಕೇಸು ಹಾಕ್ತಾರು ನನ್ನಮೇಲೆ ...ಆದರೇ ಅದೇ ಹುಲಿ ತಿಂದರೆ, ಹಾಗಲ್ಲ ನೋಡಿ ಅದು ಕೊಂದಹಾಗಾಯ್ತು

ಅಲ್ಲವೆ ? ಯೋಚನೆಮಾಡಿ ನೋಡಿ ಇದೆಲ್ಲಾ ಕಾಮನ್‌ಸೆನ್ಸ್ ವಿಚಾರ ಹೌದೋ ಅಲ್ಲವೊ?"

"ಹೌದು ಹೌದು .. ಆಮೇಲೆ?"

"ಆಮೇಲೆ ಕೇಳಿ... ಆ ಹುಲಿರಾಯ ದೂರ ಸರಿದು ನಿಂತಿತು ನೆಲ ಅಪ್ಪಳಿಸಿತು ಆರ್ಭಟಿಸಿ ನೆಗೆದು ಕೆರೆಯ ಕಡೆ ಲಂಘಿಸಿ ಬೇರೆ ಬೇಟೆಯನ್ನು ಹುಡುಕಿಕೊಂಡು ಹೊರಟುಹೋಯಿತು... ಇದರಿಂದ ಎಂತಹ ಪರಿಸ್ಥಿತಿ ನಾವು ಎದುರಿಸಬೇಕಾಯ್ತು ಅನ್ನೋದನ್ನ ಆಲೋಚನೆಮಾಡಿ ..."

"ಹನುಮಂತರಾಯನ್ನ ನರಭಕ್ಷಕ ಭುಜಿಸಲೇ ಇಲ್ಲವೆ ?"

"ಇಲ್ಲ. ಅವರ ಆರ್ಭಟದಲ್ಲೇ ನಾನು ಅರ್ಥಮಾಡಿಕೊಂಡೆ ಹನುಮಂತರಾಯ ನರನಲ್ಲಾ ಎಂದು. ಅವನಲ್ಲಿ ಪ್ರಾಣಿವರ್ಗದ ಗುಣಗಳೇ ಪ್ರಧಾನವಾಗಿದ್ದ ಕಾರಣ ಅವನನ್ನು ಅದು ಮುಟ್ಟಲಿಲ್ಲ. ಮರುದಿನ ಶಾನುಭೋಗರು ಬಂದಾಗ ಹನುಮಂತ ನಗುತ್ತಿದ್ದ. ಮತ್ತೆ ಅವನು ಮನೆ ಸೇರಿದಾಗ ಅವನ ಹೆಂಡತಿಯ ನಗು ಮಾಯವಾಗಿ ನರಭಕ್ಷಕನನ್ನು ಕಂಡಂತೆ ಬೆದರಿ ಮತ್ತೆ ಅತ್ತಳು..."

"ಸರಿ ಈ ಹುಲಿನ್ನ ಹ್ಯಾಗೆ ಕೊಂದಿರಿ ಕಡೆಗೆ ..."

"ಕೇಳಿ ಹೇಳ್ತಿನಿ... ಊರ ಜನರೆಲ್ಲಾ ನನಗೆ ಮೊರೆ ಇಟ್ಟರು— ನೀವೇ ಯಾಕೆ ಬೇಟೆಯಾಗಿ ಬಲಿ ಆಗಬಾರದೂಂತ ......ಆಮೇಲೆ ಶಿಕಾರಿ ಯಾರು ಮಾಡೋರು ಅನ್ನೋ ಪ್ರಶ್ನೆ ಅಡ್ಡಬಂದು, ಬೇರೆ ಉಪಾಯಕ್ಕಾಗಿ ನನ್ನ ಕಾಲಿಗೇ ಬಿದ್ದರು."

"ಅಂತೂ ಕಡೆಗೂ ನೀವೇ ಗತಿ ಅನ್ನಿ."

"ಮತ್ತೇ.....ನಮ್ಮ ನರಸಿಂಹ ಅವನಿಹಳ್ಳಿ ಹೆಣ್ಣು ಆಗಿರೋದು.....ಹೊಸಗೆ ಆದ ಹೊಸಪರೀಲಿ ಹ್ಯಾಗೆ ಆಡುತ್ತೆ ಈ ಗಂಡುಗಳೂನ್ನೋದು ಗೊತ್ತಲ್ಲ. 'ಬ್ಯಾಡವೋ' ಅಂತ ಅಂಗಲಾಚಿದಳು ಅವನ ಅಮ್ಮ. ಇವನು ಕೇಳಲಿಲ್ಲ. ರಾತ್ರಿ ಹೆಂಡ್ತಿ ಇರೋ ಹಳ್ಳಿಗೆ ಹೊರಟೇಬಿಟ್ಟ. ನರಭಕ್ಷಕ ಹುಲಿರಾಯನಿದ್ದ ಕಾಡಿನ

ಮುಖಾಂತರವೇ ಅವನಿಹಳ್ಳಿಗೆ ಹೋಗಬೇಕು ಅವ. ಅವರಮ್ಮನ ಗೋಳು ನೋಡ ಲಾರದೆ, ನಾನು ಬಂದೂಕು ಹೆಗಲಿಗೇರಿಸಿ ಅವನ ಮೈಗಾವಲಾಗಿ ಹಿಂದೆಬಿದ್ದೆ. ಅವ ನಿಗೆ ನರಭಕ್ಷಕ ಹುಲಿರಾಯನ ಸ್ವರೂಪವನ್ನು ವಿವರಿಸಿದಾಗ ಅರ್ಧ ಕಾಡು ದಾಟಿದ ಮೇಲೆ ಹಿಂದಿರುಗುವ ಸಲಹೆ ಮಾಡಿದ. ನಾನು ಅವನನ್ನೇ ಬೇಟೆಯನ್ನಾಗಿ ಮಾಡಿ ಯಾಕೆ ಆ ನರ,ಭಕ್ಷಕನನ್ನು ಕೊಲ್ಲಬಾರದು ? ಎಂದು ಯೋಚಿಸಿದೆ. ಜೊತೆಗೆ ನನ್ನ Shooting Kitನ ಜೊತೆ ಒಂದು ಕತ್ತೆ ಚರ್ಮವೂ ಇತ್ತು...

"ಕತ್ತೆ ಚರ್ಮ? ಅದ್ಯಾತಕ್ಕೆ?"


"ಆತುರ ಬೇಡ. ಕೇಳಿ...ದೂರದಿಂದ ಆ ಹುಲಿಯ ಘರ್ಜನೆ ಕೇಳಿಸಿತು. ತಡ ಮಾಡಿದರೆ ಇಬ್ಬರನ್ನೂ ಆ ಕ್ರೂರಮೃಗ ತಿಂದು ತೇಗುತ್ತದೆ ಏನು ಮಾಡೋದು?... ನರಸಿಂಹನ್ನೋ "ಅವನಿಹಳ್ಳಿಗೆ ಹೋಗಿಬಂದಮೇಲೆ ಬೇಕಾದರೆ ಅದು ನನ್ನ ತಿನ್ನಲಿ. ಖಂಡಿತ ಭಾಷೆ ಕೊಡ್ತೀನಿ. ಪುಣ್ಯಕೋಟಿ ಎಂಬ ಗೋವು ಹಿಂದೆ ಕೊಟ್ಟಿರಲಿಲ್ಲವೆ? ಆ ಗೋವು ನಮ್ಮ ವಂಶೀಕರ ಮನೇಲಿ ಇದ್ದದ್ದು. ಖಂಡಿತ ನಾನು ವಾಪಸ್ಸು ಬರ್ತೀನಿ' ಅಂತ ನನ್ನ ಹತ್ತಿರ ಹೊಡ್ಕೊಂಡ. 'ನಾನೇನು ಹುಲಿರಾಯನೆ ?' ಎಂದಾಗ ಬಂದೂಕಕ್ಕೆ ಅಡ್ಡಬಿದ್ದು ಉಳಿಸು ಎಂದು ಅಂಗಲಾಚಿದ ಹೆದರದೆ ಧೈರ್ಯವಾಗಿರು ಅಂತ ಅಭಯ ನೀಡಿದೆ. ಒಂದು ಮೋಟು ಮರದ ಮೇಲೆ ಅವನನ್ನ ಹತ್ತಿಸಿದೆ. ನಾನು ಆ ಕತ್ತೆ ಚರ್ಮವನ್ನು ಹೊದ್ದು ಮರದ ಕೆಳಗೆ ಮಲಗಿದೆ...ನರಮನುಷ್ಯನ ವಾಸನೆ ಹಿಡಿದು ಜಂಗನೆ ನೆಗೆದು ಬಂತು ಆ ನರಭಕ್ಷಕ ಹುಲಿ. ಮರದಮೇಲಿದ್ದ ನರ ಸಿಂಹನನ್ನು ನೋಡಿತು. ಆರ್ಭಟಿಸಿ ಎಗರಲಾಡಿತು. ಕೈಗೆ ಸಿಕ್ಕಿದ್ದ ಆ ಬೇಟೆಗಾಗಿ ಬಡಿದಾಡಿತು.

"ನಿಮ್ಮನ್ನ ತಿನ್ನಬಹುದಿತ್ತಲ್ಲಾ ?"

"ನನ್ನನ್ನ ಕತ್ತೆ ಅಂತ ತಿಳಿದು ಮೋಸಹೋಯ್ತು ಆ ಹುಲಿ. ನಾನು ಮಾತಾಡಿದ್ದರೆ ಇವತ್ತು ಆ ಕಥೆ ಹೇಳೋಕೆ ನಾನೆಲ್ಲಿರ್ತಿದ್ದೆ? ಕೇಳಿ ಮುಂದೆ. ಮೆಲ್ಲಗೆ ಹಾಗೇ ಮರಕ್ಕೆ ಒರಗಿ ಕುಳಿತು ಒಂದು ಸಲ ಅದು ಮೇಲೆ ಎಗರಿ ನರಸಿಂಹನಿಗಾಗಿ ಬಾಯಿ ಬಿಟಾಗ ಕತ್ತಿಗೆ ಗುರಿ ಇಟ್ಟು ಢಮಾರ್ ಎಂದು ಗುಂಡು ಉಡಾಯಿಸಿದೆ. ಒಂದೇ ಕ್ಷಣದಲ್ಲಿ ಆ ನರಭಕ್ಷಕ ಭಯಂಕರವಾಗಿ ಆರ್ಭಟಿಸಿ ಅಯ್ಯೋ ಎನ್ನುತ್ತಾ ಹುಲಿರಾಯನಲ್ಲಿಯೆ ತನ್ನ ಪ್ರಾಣವ ಬಿಟ್ಟಿತು ಎಂದರು.

"ಆಮೇಲೆ... ಎಂದು ಉಸಿರು ಹಿಡಿದು ಕೇಳುತ್ತಿದ್ದ ನಾನು ಬಿಸುಸುಯ್ದೆ.

"ಆಮೇಲೇನು ? ಇದೆಯಲ್ಲ ಹಾರ ತುರಾಯಿ ಮೆರವಣಿಗೆ, ಉತ್ಸವ ಎಂದು ಅಲ್ಲಿಗೇ ಮಾತು ನಿಲ್ಲಿಸಿದರು. ಮಿಂಚೊಂದು ಸುಳಿಯಿತೇನು ? ಅಲ್ಲ ಸಾವಂ ತ್ರಮ್ಮ ವಾಪಸ್ಸು ಬಂದರು. ಅವರ ಹಿಂದೆಯೇ ದಫೇದಾರ್ರು ಒಳಗೆ ಹೋದರು. ನಾನು ಹೊರಗೆ ಹೋದೆ. ಹೋಗುತ್ತಿದ್ದಂತೇ ನರಭಕ್ಷಕ ಹುಲಿ ಕಥೆ ಮೆಲುಕು ಹಾಕಿದೆ.



"ಈ ಟಿ.ವಿ. ಜನಕ್ಕೆ, ಬಟ್ಟೆ ಒಗಿಯೋದು, ಚಾಕಲೇಟ್ ತಿನ್ನೋದು ಬಿಟ್ರೆ ಬೇರೇನೂ ಕೆಲ್ಸ ಇಲ್ವೇನಣ್ಣಾ ?"

ಗ್ಲೋರಿಫೈಡ್ Virtues ಉ ಗೋರಿ ಕಂಡಾಗ

—ಬಿ. ನಾಗೇಂದ್ರ

ರಾಯ್ರು Teetotallarರು! ಬಲು ಮಡಿ ... ವ್ಹಿಸ್ಕಿ ಬ್ರಾಂದಿ .. ಬೀರೂ ... ವೈನೂ... ಏನೂ ಮುಟ್ಟಾರ್ರು... ! ಮೂಸಲಾರ್ರು.... ! ಅದೇ ಒಂದು ಹೆಮ್ಮೆ ...ಅವರಿಗೆ.

ರಾಯ್ರಿಗೆ ಖುಷಿ ಮಾಡಲಿಕ್ಕೆ, ಕಛೇರಿ ಕೆಲಸದಲ್ಲಿ ಅವರ ಸಹಾಯ ಬೇಡಲು ಬಂದವರು, ಒಂದು ಕೆ.ಜಿ. seedless ದ್ರಾಕ್ಷಿ ತಂದಿಟ್ರು... ! ರಾಯ್ರಿಗೆ ಬಾಯಿ ಚಪಲ ! ದ್ರಾಕ್ಷೀ ಬಗ್ಗೆ weakness ಬೇರೆ ! ಹೆಂಡತಿ ಮಕ್ಕಳಿಗೆ ದ್ರಾಕ್ಷಿ ಮುಖ ತೋರಿಸಿ ತಾವೇ 950gmsಉೂ ನುಂಗಿದ್ರು.

ರಾಯ್ರ ಜಂಭ ಕೇಳಿ ಬೇಸತ್ತಿದ್ದ ಅವರ ಧರ್ಮಪತ್ನಿ ಮೂದಲಿಸಿದರು "ದ್ರಾಕ್ಷಿಯಿಂದ ಗೆಲ್ಲಬಹುದಾದವನಿಗೆ ದ್ರಾಕ್ಷಾರಸವೇಕೆ ?" ಎಂದು.

"ವಯಸ್ಸಾದ ಮೇಲೆ ಬಲು ಚಪಲ. ತಡೆಯೋದು ಬಲು ಕಷ್ಟ ಜಿಹ್ವಾ ಚಾಪಲ್ಯ !" ಎಂದು ರಾಯ್ರು ಪಶ್ಚಾತ್ತಾಪಪಟ್ರು, ಅಖಂಡವಾಗಿ ದ್ರಾಕ್ಷಿ ತಿಂದು ಮುಗಿಸಿದ ಮೇಲೆ

"ಬಾಯಿ ಚಪಲ ಒಂದೇನೇ ? ಅದು publicನಲ್ಲಿ ಹೇಳ್ಕೊಬೋದಾದ excuseಉ. ಮಿಕ್ಕಿದ ಚಪಲಗಳನ್ನ ಹೇಳ್ಕೊಳ್ಳಾಗತ್ಯೇ ?......" ಎಂದು ಹಂಗಿಸಿ, ರಾಯ್ರ ಬಾಯ್ ಬಡಿದ್ರು. ರಾಯ್ರಾಳ ತಿಳಿದ ಅವರಾಕೆ.

ಯಾತ್ರಿಕರ ಪತ್ರ

—"ಕೇಫ"

ಅಿಹಿಸುಿಲ್ಯಾಪುರ ಬಿಟ್ಟು, ರಾಜ, ಚಂದಿ, ನಾನು ಅಡ್ಡಗದ್ದೆ ಸೇರಿದಾಗ ರಾತ್ರಿಯಾಗಿತ್ತು. ನರಸಿಂಹಸ್ವಾಮಿಯವರ ರಾಯರು ದಯಮಾಡಿಸಿದ ರಾತ್ರಿಯಲ್ಲಿ–ರಾಜೀವ್‌ಗಾಂಧಿ ತರ್ಬೇಕೊಂತಿರೋ 21ನೇ ಶತಮಾನಕ್ಕೆ 13 ವರ್ಷಗಳ ಹಿಂದಿನ ಒಂದು ರಾತ್ರಿಯಾಗಿತ್ತು. ಇದು ಯಾಕೆ ರಿಪೋರ್ಟ್ ಮಾಡ್ಬೇಕಾಯ್ತೂಂದ್ರೆ–ಈ 21ನೇ ಶತಮಾನ ಬರುತ್ತೇಂಬೋ ಸಮಾಚಾರ ರೇಡಿಯೋ, ಟಿ.ವಿ.ಗಳ ಮೂಲ್ಕ, ನಾಡಿನ ಮೂಲೆ ಮೂಲೆಗಳಿಗೂ–ಅಂದ್ರೆ ಹಿಂದಿ 'ಕೋನೇಕೋನೇಕೋ –ಸೇರಿ, ಈ ಅಡ್ಡಗದ್ದೆಗೂ ಮುಟ್ಟಿತ್ತು. ನಮಗೆ ತಿಳಿದಿದ್ದು ಆ ಊರಿನ ಕ್ಯಾತಮಾರಮ್ಮನ ಗುಡಿ ಮುಂದೆ ಒಂದು ಸಮಾರಂಭ ನಡೀತಾ ಇದ್ದು, ಅಲ್ಲಿ ಒಬ್ಬಾತ ಮಾಡಿದ ಭಾಷಣದಿಂದ.

ನಾವು ಹೋಗೋ ಹೊತ್ತಿಗೆ ಪ್ರಾರ್ಥನೆ ಮುಗೀತಿತ್ತು. ಯಥಾ ಪ್ರಕಾರ ಲೋಕಲ್ ಲತಾ ಮಂಗೇಶ್ಕರ್, ಆಶಾ ಭೋಸ್ಲೆ ಅವರಿಂದ. ಅವುಗಳು ಹಾಡಿದ ಗೀತೆ ಯಾವ್ದೂಂತ ನಮಗೆ ಗೊತ್ತಾಗ್ಲಿಲ್ಲ. ಕೊನೇ ವರ್ಡ್ ಮಾತ್ರ–ನಮೋತ್ಸುತೆ–ಕೇಳಿಸಿತು. ಕರತಾಡನ.

ಯಾರೋ ಒಬ್ಬಾತ ನಮ್ಮನ್ನು ನೋಡಿದ ತಕ್ಷಣ ನಾವೇ 21ನೇ ಶತಮಾನಾನ ಕೈಲಿಟ್ಕೊಂಡು ತಂದಿದ್ದೇವೇನೋ ಅನ್ನುವಷ್ಟು ಮರ್ಯಾದೆಯಿಂದ ನಮ್ಮನ್ನ ಕರ್ಕೊಂಡು ಹೋಗಿ ಸಭೆಯ ಮುಂದಿನ ಸಾಲಿನಲ್ಲಿ ಕೂಡಿಸಿದ. ನಮ್ಮ ಸೈಕಲ್ಲುಗಳನ್ನೂ ಲಗ್ಗೇಜನ್ನೂ ಯಾರೋ ನಮ್ಮ ಕೈಗಳಿಂದ ಬಿಡಿಸಿಕೊಂಡು ತಮ್ಮ ಸುಪರ್ದಿಗೆ ತೆಗೆದುಕೊಂಡಿದ್ದರು.

ಸ್ವಾಗತ ಭಾಷಣ ಶುರುವಾಯ್ತು—

ಈ ದಿನ ನಮ್ಮ ಅಡ್ಡಗದ್ದೇಲಿ ನಡೆಯೋ ಈ ಉತ್ಸವ ತುಂಬಾ ಮುಖ್ಯವಾದದ್ದು. ಅದಕ್ಕೆ ನಿಮ್ಗೆಲ್ಲಾ ಸ್ವಾಗ್ತಾ. ಪರ್ಪಂಚಕ್ಕೆಲ್ಲಾ ಬಂದಂಗೆ ನಮ್ಮ ಅಡ್ಡ

ಗದ್ದೇಗೂ 21ನೇ ಶತಮಾನ ಬರ್ತದೆ. ಅವನ್ನ ಸ್ವಾಗ್ತಾ ಮಾಡಾಕೇಂತ ಒಂದು ಕಂಪ್ನಿ-ಕ್ಷವಿನ್ನಿ—ಒಂದು ಸಮ್ತಿ ತಾಪ್ನೆ ಮಾಡಾಕಿದ್ದೀವಿ. ಅದ್ಕೇ ನಮ್ಮೂರ್ಗೆ, ನಮ್ಮ ಜಿಲ್ಲಾ ಕಚೇರೀಂದ ಮೂವರು ದೊಡ್ಮನುಸ್ರು ಬಂದೌರೆ. ಅವರೀಗ ಮಾತಾಡ್ತಾರೆ"

ಕರತಾಡನ—ಪ್ರಚಂಡ ಕರತಾಡನ.

ಯಾರು ಆ ಮೂವರು ದೊಡ್ಮನುಸ್ರು ? ನಾನು, ರಾಜ, ಚಂದಿ—ನಮ್ಮ ಅತ್ತ ಇತ್ತ ಸುತ್ತಮುತ್ತ ನೋಡಿದೆವು ವೇದಿಕೆ ಮೇಲಿದ್ದ ಆಸಾಮಿ ಕೆಳಗಿಳಿದು- "ಬನ್ನಿ ಸ್ವಾಮಿ-ಪ್ಲಾಟ್‌ಫಾರಂಗೆ"— ಅಂತ ಬಲವಂತವಾಗಿ ಕರೆದಾಗ್ಲೆ ನಮಗೆ ಗೊತ್ತಾಗಿದ್ದು —ಆ ಮೂವರು ದೊಡ್ಮನುಸ್ರು ನಾವೇ—ಅಂತ !

ನಮಗೆ ಧಿಡೀರ್ ಮರ್ಯಾದೆ, ಧಿಡೀರ್ ಜವಾಬ್ದಾರಿ—ಧಿಡೀರ್ ಸಂಕಟ ನೀನು ಮಾತಾಡು ನೀನು ಮಾತಾಡು ನೀನು ಮಾತಾಡು ಅಂತ, ರಾಜ, ಚಂದಿ, ನಾನು—ನಮ್ಮ ನಮ್ಮಲ್ಲೆ ವಾದಮಾಡಿಕೊಂಡ್ವು. ಕೊನೆಗೆ ಚಂದಿ ಎದ್ದು ನಿಂತ.

"ಅಡ್ಡಗದ್ದೆ ಮಹಾಜನರೇ, ಇವತ್ತು ನಿಮ್ಮನ್ನು ಉದ್ದೇಶಿಸಿ ನಮ್ಮ ಸ್ನೇಹಿತರು ಮಾತಾಡ್ತಾರೆ. ಸಾವಧಾನದಿಂದ ಕೇಳಿ" ಅಂತ ನನ್ನನ್ನು ತೋರಿಸಿದ.

ಪ್ರಚಂಡ ಕರತಾಡನ.

"ಹೆದರ್ಕೋಬೇಡ್ವೋ—ನಾನು ಮೆಲ್ಲಗೆ ಪ್ರಾಮ್ಟ್ ಮಾಡ್ತಾ ಇರ್ತೀನಿ. ನೀನು ದೊಡ್ಡದಾಗಿ ಬೊಗಳ್ತಾ ಇರು" ಅಂದ.

ಎದ್ದು ನಿಂತೆ. ರಾಜ, ಚಂದಿಯಿಂದ ಕರತಾಡನ.

"ಮಹಾಜನರೇ, ಮಹಿಳೆಯರೇ" (ಒಂದೇ ಒಂದು ಲಂಗಧಾರಿ ಮಗು ಕೂತಿತ್ತು)—"ನಿಮ್ಮವರು ಹೇಳಿದ ಹಾಗೆ 21ನೇ ಶತಮಾನ ಅಗೋ—ರೌಂಡ್—ದಿ-ಕಾರ್ನರ್ ಬರ್ತಾ ಇದೆ. ಅದರ ಹಿಂದೆ ನಮ್ಮ ಪ್ರಧಾನಿಗಳ ಶಕ್ತಿ ದಬ್ತುತ್ತಿದೆ. ಇದು ಗಾಂಧೀ ವಂಶದೋರು ತರ್ತಾ ಇರೋ ಮೂರ್ನೇ ಶತಮಾನ. ಮಹಾತ್ಮಾ ಗಾಂಧಿ—19ನೇ ಶತಮಾನ ತಂದ್ರು. ಇಂದ್ರಾ ಗಾಂಧಿ 20ನೇ ಶತಮಾನ ತಂದ್ರು. ಈಗ ರಾಜೀವ್ ಗಾಂಧಿ—21ನೇ ಶತಮಾನ ತರ್ತಾರೆ. ನಾವೆಲ್ಲಾ ಗಾಂಧೀತರಾನೇ

ಶತಮಾನಗಳನ್ನ ತರ್ತಾನೇ ಇರ್ಬೇಕು. ಆಗ್ಲೇ ಅಡ್ಡಗದ್ದೆ ಜನ ಮುಂದಕ್ಕೆ ಬರೋದು. ಎಲ್ರೂ ಹೇಳಿ—ಗಾಂಧೀಕೀ ಜೈ !.........”

ರಾಜ ನಿಲ್ಲಿಸಿದ. ನಾನೂ ನಿಲ್ಲಿಸಿದೆ.

ಪ್ರಚಂಡ ಕರತಾಡನ.

(ಸಶೇಷ)



“ಏನ್ಹೇಳ್ಲಿ, ಎಲ್ಲಾ ನನ್ನ ಕರ್ಮ ! ಮಗನಿಗೆ ಅಮೇರಿಕದ ಹೆಂಡ್ತಿ, ಮಗಳಿಗೆ ಮೆಕ್ಸಿಕೋದ ಗಂಡ ಅಂತ ಹಿಗ್ತಾ ಇದ್ರೆ, ಅಳಿಯ ಸೊಸೆ ಇಬ್ರೂ ಒಬ್ರನ್ನೊಬ್ರು ಮದ್ವೆ ಆಗ್ಬಿಡೋದೇ ?”

ಹಾರಾಟಕ್ಕೆ ವಿಮೆ ?

—ಕಮಲಾ ರಾಮಸ್ವಾಮಿ

"ನಿಮ್ಮ ಪ್ರಯಾಣ ನಿಲ್ಸೋಕೆ ಸಾಧ್ಯವೇ ಇಲ್ವಾ"? ದೈನ್ಯದಿಂದ ಬೇಡಿದ್ಳು ಸುಂದ್ರಿ. "ನೋಡು ನಾನು ಮಾಡ್ತಾ ಇರೋದು ಚಾಕರಿ, ದಿವಾನಗಿರಿ ಅಲ್ಲಾ. ನನಗೆ ಬೇಕಾದಾಗ ಹೋಗಿ, ಬೇಡ್ವಾದಾಗ ಬಿಡಂಕ್ಕೆ" ರಾಯರು ರೇಗಿದರು.

ಸುಂದ್ರೀಗೆ ಅಳು ಬಂತು. ಸೊರ್, ಬುಸ್ ಎನ್ನುತ್ತಾ ಅಡಿಗೆ ಮನೆಗೆ ಹೋದಳು. ಕಾರಣ ಇಷ್ಟೆ! ಹಾಲೆಂಡಿನಲ್ಲಿ ಆಗುವ Seminar ಗೆ ರಾಯ್ರನ್ನ ಆಯ್ಕೆ ಮಾಡಿದ್ರು. ಜೀವನದಲ್ಲಿ ಮೊದಲ ಬಾರಿಗೆ ಸರ್ಕಾರದ ಖರ್ಚನಲ್ಲಿ ವಿದೇಶ ಯಾತ್ರೆಯನ್ನು ಕರುಣಿಸಿದ್ದ ಆ ದಯಾಮಯಿ! ಆದ್ರೆ ಏನನ್ಯಾಯ ! ರಾಯ್ರು ಹೊರಡುವ ಮೂರು ದಿನಗಳ ಮುಂಚೆ ಆ ಕರಾಚಿ Pan Am ಗಲಾಟೆ ಆಗೋಣ್ವೆ ? ಸುಂದ್ರಿ ತುಂಬಾ nervous. ಏನೋ ದೇವ್ರನ್ನ ನಂಬ್ಕೊಂಡು ಇದ್ದೆ. ಇದೆಲ್ಲಿ ಬಂತಪ್ಪಾ ಪೀಕಲಾಟ! ತುಂಬಿದ ಸಂಸಾರ, ಹೆಚ್ಚು ಕಡಿಮೆ ಆದರೆ ಗತಿ ಏನು ? ಸುಂದ್ರಿ ಪಕ್ಕದ ರೂಮಿಗೆ ನುಗ್ಗಿದ್ಳು.

"ನೀನಾದ್ರೂ ಹೇಳ್ಬಾರ್ದಾ ನಿಮ್ಮ ಭಾವಂಗೆ! ಹೋಗ್ಲೆ ಬೇಕು ಅಂತ ಹಠ ಹಿಡ್ದಿದ್ದಾರೆ" ವೆಂಕಟಪತಿ ಆರಾಮ ಖುರ್ಚಿಯಲ್ಲಿ ಕೂತು, ನೆಪಕ್ಕೆ ಪುಸ್ತಕ ಹಿಡಿದು ತೂಕಡಸ್ತಾ ಇದ್ದ.

"ಅಲ್ಲಕ್ಕಾ. ನೀನು ಹೇಳೋದು ಚೆನ್ನಾಗಿದೆ. Conferences Seminar, ಎಲ್ಲಾನೂ ನಮ್ಮನುಕೂಲಕ್ಕೆ ಇಟ್ಕೊಳ್ಳೋಕೆ ಆಗುತ್ಯೆ ?"

"ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ ಹೇಳಿದ ಹಾಗೆ! ನಂಗೆ ಎಷ್ಟು ಭಯ ಆಗ್ತಾ ಇದೆ ವೆಂಕೂ"

ವೆಂಕು ಎದ್ದು ಕುಳಿತ. ಅಕ್ಕನ ಕಣ್ಣಿನಲ್ಲಿ ನೀರು! ಅವಳು ಸಂಕಟಪಟ್ಟರೆ ಇವನಿಗೆ ಬಹಳ ವ್ಯಥೆ—ತಾಯಿ ಇಲ್ಲದ್ದರಿಂದ ಅಕ್ಕನೇ ಸಾಕಿದ್ದು.

"ಅಯ್ಯೋ ! ನೀನ್ಯಾಕೆ ಯೋಚನೆ ಮಾಡ್ತೀಯಕ್ಕಾ ! ಅವರು ಸುಖವಾಗಿ ಪೋಗಿ ಬರೋದು ನನ್ನ ಜವಾಬ್ದಾರಿ"

"ನಿನ್ನ ತಲೆ !" ರೇಗಿದಳು ಸುಂದ್ರಿ

* * *

ನಂಜುಂಡೇಶ್ವರನ ಮೇಲೆ ಭಾರ ಹಾಕಿ ಸುಂದ್ರು ರಾಯರ್ನ ಕಳುಹಿಸಿದಳು. ಸಂಜೆ ನಾಕು ಗಂಟೆಯಿಂದ A.I.R., T.V ವಿವಿಧ ಭಾರತಿ ಯಾವು ಯಾವುದರಲ್ಲಿ News ಬರುತ್ತೇ ಅಷ್ಟನ್ನೂ ಕೇಳಿದ್ಳು. ಭಾವನ್ನ ಬಿಡಂಕ್ಕೆ AIRPORT ಗೆ ಹೋಗಿದ್ದ ವೆಂಕಟಪತಿ ಓಂದಿರುಗಿದ. ಸುಖ್ವಾಗಿ ತಲಪ್ತಾರೆ ಅಕ್ಕ ! ನೀನೇನೂ Worry ಮಾಡ್ಕೋಬೇಡ" ಅಂತಂದು ಆನಂದವಾಗಿ ಚಿತ್ರಹಾರ್ ನೋಡುತ್ತಾ ಕೂತ.

ಅಕ್ಕ ರಾತ್ರಿ B.B.C. ನೂ ಆಲಿಸಿರಬೇಕು. ಯಾವಾಗ ನಿದ್ದೆ ಮಾಡಿದ್ಳೋ ! ಬೆಳಿಗ್ಗೆ ಪೇಪರ್ ಬಂದಿದ್ದೂ ನಿಧಾನ. ಸುಂದರಿಗೆ ಚಡಪಡಿಕೆ ! ಪೇಪರ್ ಬರುತ್ತಿದ್ದ ಹಾಗೇ ಬಿಡಿಸಿ ಕಣ್ಣೋಡಿಸಿದಳು.

"ವೆಂಕೂ, ವೆಂಕೂ, ಏಳೋ ! ಇಲ್ನೋಡೊ ಪೇಪರ್ನ" ಗಡಗಡನೆ ನಡುಗುತ್ತಾ ಚೀರಿದಳು ಸುಂದ್ರಿ.

"ಏನಿದೆ ?" ಗಡಬಡಿಸಿ ಎದ್ದ ವೆಂಕೂ.

"ಮುಂಬಯಿಯಿಂದ ರಾತ್ರಿ ಒಂದೂವರೆಗೆ ಹೊರಡಬೇಕಾಗಿದ್ದ ವಿಮಾನ ಬಾಂಬ್ Scare ನಿಂದಾಗಿ ಎರಡು ಗಂಟೆ ತಡವಾಗಿ ಹೊರಟಿತು. ಓದಿ ಪಕಪಕನೆ ನಕ್ಕ ವೆಂಕೂ "ಈಗ್ಲಾದ್ರೂ ಸಮಾಧಾನ ಆಯ್ತು ! ಆತಂಕವಿಲ್ದೆ ಇರು. ಅಂಜೋರ ಮೇಲೆ ಕಪ್ಪೆ ಹಾಕಿದ ಹಾಗೆ ! ನಂಗ್ಯಾಕೋ ತಲೆ 'ಧಿಂ' ಅಂತಾ ಇದೆ" "ಅಯ್ಯೋ ನಿನ್ನ ಪ್ರಲಾಪವೆ ! ನೆನ್ನೆ ನಿನ್ನ ಆತಂಕ ಕಂಡು ನನಗೂ ಭಯ ಆಯ್ತಕ್ಕಾ, ಪ್ಲೇನ್‌ನ ಸರಿಯಾಗಿ ತನಿಖೆ ಮಾಡ್ಲಿ–ನಾಯಿ ಗೀಯಿ, ಎಲ್ಲಾ ಬಿಟ್ಟು ನೋಡ್ಲಿ ಅಂತ ನಾನೇ S.T.D. ಲಿ Bomb scare ಸುದ್ದೀನ ಮುಗುಮ್ಮಾಗಿ Bombay AIRPORT ಗೆ ಮಾಡಿದ್ದೆ. ಈಗ ತಾನೇ ಕರಾಚಿ ಗಲಾಟೆ ಆಗಿರೋದ್ರಿಂದ ಅದರ ಬಿಸೀಲಿ ನಮ್ಮವ್ರು ಹುಷಾರು, ಎಲ್ಲಾ ಚೆನ್ನಾಗಿ ತನಿಖೆ ಮಾಡ್ಲೀಂತ ಮಾಡ್ದೆ. ಅದಕ್ಕೆ ನಿಂಗೆ ಹೇಳಿದ್ದು Worry ಮಾಡ್ಕೊ ಬೇಡಾಂತ"...............

ಕೋಳಿ ಹುಂಜ

—ಬಿ. ಎಂ. ಎನ್. ಮೂರ್ತಿ

ಸುಮಾರು 30 ವರ್ಷಗಳ ಹಿಂದಿನ ಮಾತು.

ನಮ್ಮ ಹಳ್ಳಿಯಿಂದ ನಮ್ಮೂರ ಬೋರನ ಮಗ ಚಿಕ್ಕ ಇಂಜಿನಿಯರಿಂಗ್ ಪಾಸ್‌ಮಾಡಿ ಎರಡು ವರ್ಷ ಅಮೆರಿಕಾಕ್ಕೆ ಸರ್ಕಾರದ ವೇತನ ಪಡೆದು M.S ಓದಲು ಹೋಗುತ್ತಾನೆ ಎಂಬ ಸಮಾಚಾರ ತಿಳಿದಕೂಡಲೇ ನಮಗೆಲ್ಲರಿಗೂ ಸಂಭ್ರಮವೇ ಸಂಭ್ರಮ. ನಮ್ಮ ಹಳ್ಳಿಯಿಂದ ಹೊರದೇಶಕ್ಕೆ ಓದಲು ಹೋದವರ ಪೈಕಿ ಚಿಕ್ಕನೇ ಮೊದಲನೆಯವನು. ಅವನು ಹೊರಡುವವರೆಗೂ ನಿತ್ಯವೂ ಅವನಿಗೆ ಭಾರಿ ಊಟ, ಉಪಚಾರ, ಸತ್ಕಾರ. ಹೊರಟ ದಿನವಂತೂ ನಮ್ಮೂರ್ನೋರೆಲ್ಲಾ ಭಾರಿ ಅಲಂಕಾರಮಾಡ್ಕೊಂಡು ಹಳ್ಳಿಯಿಂದ ಎರಡು ಮೈಲಿ ದೂರದಲ್ಲಿದ್ದ ರೈಲ್ವೇ ಸ್ಟೇಷನ್ನಿಗೆ ಹೋಗಿ ಬೀಳ್ಕೊಟ್ಟ ಚಿತ್ರ ಇನ್ನೂ ಹಸಿರಾಗಿದೆ. ಬೋರ ಮತ್ತು ಅವನ ಹೆಂಡ್ತಿ ರಂಗಿ ಮಾತ್ರ ಮುಂಬಯಿವರೆಗೂ ಹೋಗಿ ಬೀಳ್ಕೊಟ್ಟರು. ಅದೇ ಮೊದಲು ಅವರು ನೋಡಿದ್ದು ಹಾರೋ ಪ್ಲೇನ್ನಾ ಭೂಮಿಯ ಮೇಲೆ.

ಅಮೆರಿಕಾ ತಲ್ಪಿದ್ಮೇಲೆ ಚಿಕ್ಕ ಯೋಗಕ್ಷೇಮಕ್ಕೆ ಆಗಾಗ್ಗೆ ಪತ್ರ ಬರೀತಿದ್ದ. ಒಂದ್ವರ್ಷ ಆದ ಮೇಲೆ, ರಜಾಕ್ಕೆ ಹಳ್ಳೀಗೆ ಬರ್ತೀನಿಂತ ಬರೆದ ಕಾಗ್ದ ನೋಡಿ ನಂಗೆಲ್ಲಾ ತುಂಬಾ ಖುಷಿ ಆಯ್ತು. ಪರಂಗಿ ದೇಶದಿಂದ ಬರುತ್ತಿರುವ ನಮ್ಮಗೂಗೆ ಸರಿಯಾದ ಆದರದ ಸತ್ಕಾರ ಮಾಡಬೇಕೆಂದ್ಧು ಪಂಚಾಯ್ತಿ ಮೆಂಬ್ರುಗ್ಳೆಲ್ಲಾ ಒಂದ್ಮಿಟಿ ಮಾಡಿ ಸಲಹೆ ಕೇಳಿದ್ರು. ಮೀಟಿಂಗಿಗೆ ಬೆಡ್‌ಶೀಟ್ ಹೊದ್ಕೊಂಡೇ ಬಂದಿದ್ದ ಬಂದೀಗೌಡ ಕಂಬ್ಳಿ ಕವಚಿಕೊಂಡು ಕುಂತಿದ್ದ ಕರೀಗೌಡ ಎಲಡ್ಕೆ ಅಗೀತಾನೆ ಆಗ ಮಿಸಿದ್ದ ಅನಂತಯ್ಯ.

ಮೀಟಿಂಗ್ನಲ್ಲಿ ಒಬ್ಬೊಬ್ರು ಒಂದೊಂದು ಸಲಹೆ ಕೊಟ್ಟರು. ಚಿಕ್ಕನಿಗೆ ಅಮೆರಿಕಾ ಜೀವನ ಒಂದು ವರ್ಷದಿಂದ ಅಭ್ಯಾಸವಾಗಿರೋದ್ರಿಂದ ಅವನನ್ನು ಸ್ಟೇಷನ್ನಿಂದ ಮನೆಗೆ ಒಂದು ಬಾಡಿಗೆ ಕಾರ್ನಲ್ಲಿ ಕರ್ಕೊಂಬರ್ಬೇಕೂಂತ ಒಬ್ಬ ಹೇಳ್ದ ನಮ್ಹಳ್ಳಿ ಪದ್ಧತಿ ಪ್ರಕಾರ ಅವನ್ನಾ ಸ್ಟೇಷನ್ನಿಂದ ವಾಲ್ಗಾ ಊದ್ಕೊಂಡೇ ನಡೆಸೊಂಡ್ಬರ್ಬೇಕೂಂತ ಇನ್ನೊಬ್ಬ ಹೇಳ್ದ ಚಿಕ್ಕನ ಬಣ್ಣ ಹೊರೊಡೋಕ್ಕೊದಲು ತೊಳದ

ಕೆಂಪ್ಗಂತಿದ್ರೂ, ಅಮೆರಿಕಾದಲ್ಲಿ ಕೆಂಪುಬಣ್ಣ ಬಂದಿರ್ಬಹುದೆಂದೂ, ಆ ಬಣ್ಣ ನಮ್ಮ ಹಳ್ಳೀ ಬಿಸಿಲಿಗೆ ಕಪ್ಪಾಗ್ಬಹುದೆಂದೂ, ಆದ್ರಿಂದ ಛತ್ರಿ ನೆರಳಲ್ಲೇ ರಸ್ತೆ ಉದ್ದಕ್ಕೂ ಕರ್ಕೊಂಬರ್ಬೇಕೆಂದೂ ಮಗದೊಬ್ಬ ಹೇಳಿದ. ಅಂತೂ ಇಂತೂ ಚಿಕ್ಕ ಊರಿಗ್ಬಂದ್ಮೇಲೆ ಅವನನ್ನ ಛತ್ರಿ ನೆರಳಲ್ಲೇ ವಾಲ್ಗ ಊದಿಸ್ಕೊಂಡು ಹೊರ್ಟಾಗ, ಮದುವೆ ಆಗ್ಬಿದ್ದರೂ ಚಿಕ್ಕನಿಗೆ ಜ್ಞಾಪ್ಕ ಬಂದಿರ್ಬಹುದ್ದು ಕಾಶಿಯಾತ್ರೆ ಸಂಭ್ರಮ.

ಚಿಕ್ಕ ಮನೆ ಸೇರಿದ್ಮೇಲೆ ಅಮೆರಿಕಾದಿಂದ ಏನೇನ್ನಾಮಾನು ತಂದಿದ್ದಾನೇಂತ ನೋಡೋಕ್ಕೆ ಎಲ್ಲರಿಗೂ ಕುತೂಹಲ. ಒಬ್ಬೊಬ್ರು ಒಂದೊಂದು ಪ್ರಶ್ನೆ ಕೇಳೊಕೆ ಶುರು ಮಾಡಿದ್ರು. ಎಲ್ಲಾಗರ್ೂ ಸಮಂಜಸವಾಗಿ ಉತ್ತರ ಕೊಡೋದು ಚಿಕ್ಕನಿಗೆ ತುಂಬಾ ಕಷ್ಟ ಆಯ್ತು.

ಚಿಕ್ಕನ ಅತ್ತೆ ಲಚ್ಚಕ್ಕ ಸ್ವಲ್ಪ ಓದುಬರೆಹ ಇದ್ದವಳಲ್ಲದೆ ಸುಮಾರಾಗಿ ಇಂಗ್ಲೀಷನ್ನೂ ಕಲಿತಿದ್ದಳು. ಚಿಕ್ಕನ ಪರದೇಶದ ವಿದ್ಯಾಭ್ಯಾಸದ ಪ್ರತಿಫಲವನ್ನು ಹೇಗಾದರೂ ಉಪಯೋಗಿಸ್ಕೊಬೇಕೂಂತ ಮನಸ್ನಲ್ಲೇ ಯೋಚ್ನೆ ಮಾಡಿಕೊಂಡು,

"ಚಿಕ್ಕ, ನಾನೊಂದು Poultry ಸಾಕೋಣಾಂತ ಯೋಚ್ನೆ ಮಾಡ್ತಾ ಇದ್ದೇನೆ. ಅಮೆರಿಕಾದಲ್ಲಿ ಒಳ್ಳೊಳ್ಳೆ Poultry ಗಳಿವೆಯಂತೆ ಸುಮಾರು 25 ಕೋಳಿಗಳಿಗೆ ಎಷ್ಟು ಹುಂಜ ಸಾಕಿದ್ರೆ Poultry ಜೋರಾಗಿ ನಡೆಯುತ್ತೆ ?" ಎಂದ್ಕೇಳಿದ್ಲು ಚಿಕ್ಕ ಅಂದ "ಅತ್ತೆ, ಅಮೆರಿಕಾಕ್ಕೆ ನಾನು ಹೋಗಿರುವುದು ಇಂಜಿನಿಯರಿಂಗ್ ಓದೋಕ್ಕೆ. Poultry ಸಮಾಚಾರ ನನಗೆ ಅಷ್ಟು ಜಾಸ್ತಿ ಗೊತ್ತಿಲ್ಲ. ಆದ್ರೂನೂವೆ. 25 ಕೋಳಿಗೆ ಸುಮಾರು 5 ಹುಂಜ ಸಾಕಾಗ್ಬಹುದ್ದು"

ರಜಾ ಕಳೆದ್ಮೇಲೆ ಚಿಕ್ಕ ಅಮೆರಿಕಾಕ್ಕೆ ವಾಪಸ್ ಹೋರಟುಹೋದ. ವಿದ್ಯಾಭ್ಯಾಸ ಮುಗಿಸಿ ಇನ್ನೊಂದು ವರ್ಷವಾದಮೇಲೆ ಹಳ್ಳಿಗೆ ವಾಪಸ್ ಬಂದ. ಬಂದ್ಮೇಲೆ ಲಚ್ಚಕ್ಕನ Poultry ಜೋರಾಗಿ ನಡೀತಾ ಇದೇಂತ. ಕುತೂಹಲ ಕೆರಳಿದ ಚಿಕ್ಕ ಕೇಳಿದ :

"ಅತ್ತೆ, ಕಡೆಗೆ ನೀನು ಎಷ್ಟು ಹುಂಜ ತಗೊಂಡೆ. ನಿನ್ನ Poultry ಭಾರಿ ಆಗಿ ನಡೀತಿದ್ಯಲ್ಲಾ."

ಲಚ್ಚಕ್ಕ ಹೇಳಿದ್ಲು "25 ಕೋಳಿಗೆ 25 ಹುಂಜ"

ಚಿಕ್ಕ ಕಿರಿಚಿದ "ಅಷ್ಟ್ಯಾಕೆ ತಗೊಂಡೆ ಅತ್ತೆ : ಐದು ಹುಂಜಾನೇ ಸಾಕಾಗಿ ತ್ತಲ್ಲಾ".

"ನೀವು ಗಂಡುಸ್ರೇ ಹಾಗೆ ; ಸ್ವಾರ್ಥಿಗಳು ; ನಿಮ್ ಸುಖಾನ ಮಾತ್ರ ನೋಡ್ಕೋತೀರಾ" ಅಂತ ಲಚ್ಚಕ್ಕ ಚಿಕ್ಕನ ಬಾಯ್ಮುಚ್ಚಿಸ್ಬಿಡೋದೇ ?



"ಕಾಮ್ಕೊ ಅಲ್ಲಜ್ಜ, ಬುನಿಯಾದ್‌ನಲ್ಲಿ ಅವ್ಳು ಬಬ್ಲಿ !

ನಂ ಕ್ಲಬ್ಬಿನಲ್ಲಿ

—ಆನಂದ್

ಕ್ಲಬ್ಬಿನಲ್ಲಿ ಹೋದ ಸೋಮವಾರ ಹಳೇ ಗೆಳೆಯ ರಾಮು ಸಿಕ್ಕಿದ. ಮುಬಾಯ್‌ನಲ್ಲಿ ಕೆಲಸದಲ್ಲಿದಾನೆ ಅವನು. ಸರಿ, ಹಿಡಿದೆ ಅವನ್ನ, ನಮ್ಮ ಪತ್ರಿಕೆಗೆ ಆಜೀವ ಚಂದಾ ಕೊಡಯ್ಯ ನೀನು ಅಂದೆ. ಸರಿ ಅಂತ ಒಪ್ಕೊಂಡ. ತಕ್ಷಣ ಏನು ಅನುಮಾನ ಬಂತೋ ಅವನಿಗೆ! ಕೇಳಿದ: "ಅಲ್ಕಣೋ, ಆಜೀವ ಚಂದಾ ಅಂದ್ರೆ, ನಾನಿರೋ ತಂಕಾ ಅಂತಾನೋ, ಪತ್ರಿಕೆ ಇರೋ ತಂಕಾನೋ?" ನಾನು (ಕ್ಲೀನ್ ಬೌಲ್ಡ್ ಆದ ಬ್ಯಾಟ್ಸ್‌ಮನ್ ತರಹ) ನಿಂತೆ!



"ಮುಂದಿನ ಬಹಳ ಮುಖ್ಯ ಪ್ರಶ್ನೆ—ಜಿರ್ಲೆ ಹತ್ರ ಬಂದ್ರೆ ಎಷ್ಟು ಸೆಕೆಂಡ್‌ಗಳಲ್ಲಿ ಅದನ್ನ ಹೊಡೆದ್ಹಾಕ್ತೀರ?"

ಹಿಂದಿನ ಸಂಚಿಕೆಯ ಪುಸ್ತಕದ "ಹುಳುಗಳಿಗಾಗಿ" ಪ್ರಶ್ನೆಗಳಿಗೆ ಸರಿಯುತ್ತರ

೧) ಔದಾರ್ಯದ ಉರುಳಲ್ಲಿ–ಶಿವರಾಮ ಕಾರಂತ


೨) ಕಲ್ಯಾಣಸ್ವಾಮಿ—ನಿರಂಜನ


೩) ಮಂಕುತಿಮ್ಮನ ಕಗ್ಗ—ಡಿ.ವಿ.ಜಿ.

೪) ಗರುಡಗಂಬದ ದಾಸಯ್ಯ—ಗೊರೂರು ರಾಮಸ್ವಾಮಿ ಅಯ್ಯಂಗಾರ್

೫) ತಾಳೀ ಕಟ್ಟೋಕ್ಕೂಲೀನೇ—ಟಿ.ಪಿ. ಕೈಲಾಸಂ

೬) ರೂಪದರ್ಶಿ—ಕೆ.ವಿ. ಐಯ್ಯರ್





ಶುಭಾಶಯಗಳೊಂದಿಗೆ :—

ಸ್ಕೈಲಾರ್ಕ್ ಆ್ಯನ್ಸಲರೀಸ್ ಕಾರ್ಪೋರೇಷನ್

ಎ–118, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್

ಬೆಂಗಳೂರು–560 058.

REGISTERED No. BGW–180